# ಅಂಶ - 24 ಸಾರಾಂಶ ಲೇಖನ

ವಿಷಯಕ್ರಮ

24.0 ಉದ್ದೇಶ
24.1 ಪೀಠಿಕೆ
24.2 ಪಠ್ಯ - 1
24.2.1 ಪಠ್ಯವನ್ನು ಅರ್ಥಮಾಡಿಕೊಳ್ಳಲು ಸೂಚನೆಗಳು
24.3 ಪಠ್ಯದ ಮಾದರಿಗಳು
ಅಭ್ಯಾಸ - 1
24.3.1 ಪಠ್ಯದ ಚರ್ಚೆ
ಅಭ್ಯಾಸ - 2
24.4 ಪಠ್ಯ-2
24.4.1 ಪಠ್ಯದ ವಿಶ್ಲೇಷಣೆ
ಅಭ್ಯಾಸ - 3
24.5 ಪಠ್ಯ - 3
24.5.1 ಪಠ್ಯದ ವಿವರ
ಅಭ್ಯಾಸ - 4
24.6 ಒಂದು ಕಥೆ
ಅಭ್ಯಾಸ - 5
24.7 ಸಾರಾಂಶ
ಅಭ್ಯಾಸಗಳಿಗೆ ಉತ್ತರಗಳು

## 24.0 ಉದ್ದೇಶ

- ಈ ಅಂಶವನ್ನು ಓದಿದ ಮೇಲೆ ಯಾವುದೇ ಪಠ್ಯವನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂದು ತಿಳಿಯುವಿರಿ.
- ಕೊಟ್ಟ ಗದ್ಯಭಾಗವನ್ನು ಸಾರಾಂಶ ಮಾಡಿ ಹೇಳಲು ಶಕ್ತರಾಗುತ್ತೀರಿ.
- ಭಿನ್ನ ಶೈಲಿಗಳನ್ನು ಅರ್ಥಮಾಡಿಕೊಂಡು ನಿಮ್ಮ ಮಾತುಗಳಲ್ಲಿ ಸಂಗ್ರಹ ಬರೆಯುವಿರಿ.
- ಯಾವುದೇ ಗದ್ಯ ಭಾಗವನ್ನು ಸರಳಗೊಳಿಸಿ ಬರೆಯುವುದೂ ಒಂದು ಕಲೆ. ಅದನ್ನು ಅರಿಯುವಿರಿ.
- ಕಥೆಯಿದ್ದರೆ ಅಲ್ಲಿಯ ತತ್ವವನ್ನು ಅರ್ಥಮಾಡಿಕೊಂಡು ಅದನ್ನು ಸಂಗ್ರಹಿಸಬಲ್ಲಿರಿ.

## 24.1 ಪೀಠಿಕೆ

ಸಾರಾಂಶ ಲೇಖನವೆಂದರೆ ಯಾವುದೇ ಒಂದು ಕೊಟ್ಟ ಗದ್ಯ ಭಾಗವನ್ನುಸುಮಾರು ಅದರ ಮೂರನೆಯ ಒಂದಂಶಕ್ಕೆ ಇಳಿಸುವುದು. ಮೂಲದಲ್ಲಿ ಹೇಳಲಾದ ಎಲ್ಲ ಅಂಶಗಳು ಗಮನಕ್ಕೆ ಬಂದಿವೆಯೋ ಇಲ್ಲವೋ ಎಂಬುದನ್ನು ನೋಡುವುದೂ, ವಿಸ್ತಾರವಾಗಿ ಹೇಳಲ್ಪಟ್ಟ ವಿಷಯವನ್ನು ಸಂಕ್ಷೇಪದಲ್ಲಿ ಹೇಳುವ ಕಲೆಯನ್ನು ಬೆಳೆಸುವುದೂ ಸಾರಾಂಶ ಲೇಖನದ ಉದ್ದೇಶ. ಸಾರಾಂಶ ಲೇಖನದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಕೊಟ್ಟ ಲೇಖನದ ಮೂಲ ಸತ್ವವನ್ನು ಗುರುತಿಸುವುದು. ಲೇಖಕನ ಮನೋಧರ್ಮ ಯಾವ ರೀತಿ ಇದೆ ಎಂಬುದನ್ನು ಗಮನಿಸಿ ಅದಕ್ಕೆ ಬಾಧೆ ಬರದಂತೆ ವಿಷಯವನ್ನು ಸ್ವಂತ ಮಾತಿನಲ್ಲಿ ಹೇಳುವ ಕಲೆಯನ್ನು ಬೆಳೆಸಿಕೊಳ್ಳಬೇಕು.

## 24.2 ಪಠ್ಯ - 1

ಕೆಳಗಿನ ಪಠ್ಯವನ್ನು ಚಿತ್ತವಿಟ್ಟು ಓದಿರಿ.

**ಜೀವನ ಸಾಹಿತ್ಯಗಳಲ್ಲಿ ಕಾಮ - ಪ್ರೇಮ**

"ಬದುಕಿನಲ್ಲಿ ಗಂಡು ಹೆಣ್ಣುಗಳ ಸಮಸ್ಯೆ ಅನಾದಿಯಿಂದಲೂ ಬಂದದ್ದು; ಬಹು ಮುಖ್ಯವಾಗಿ ಬಂದದ್ದು. ಜೀವನದ ಬಹು ದೊಡ್ಡ ಭಾಗ ಅದರಲ್ಲಿ ಮುಳುಗಿ ತೇಲುತ್ತದೆ. ಸುಖದು:ಖಗಳಿಗೊಳಗಾಗುತ್ತದೆ ಎಂಬುದರಿಂದ ಅಂಥ ಬೃಹತ್ ಪ್ರಶ್ನೆ ಎಲ್ಲಾ ದೇಶಗಳ, ಎಲ್ಲಾ ಜನಗಳ ಸಾಹಿತ್ಯದಲ್ಲಿ ಪ್ರಧಾನ ವಸ್ತುವಾಗಿಯೇ ಕಾಣಿಸಿಕೊಂಡಿದೆ. ಬದುಕನ್ನು ಕೆಣಕುವ ಈ ಪ್ರಶ್ನೆಯು ಸಾಹಿತ್ಯಕ್ಕೆ ವಸ್ತುವಾಗದಿದ್ದರೆ ಇನ್ನಾವುದಕ್ಕಾಗಬೇಕು? ಈ ಲೈಂಗಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ, ನೀತಿಯ ಪ್ರಶ್ನೆಯೊಂದಿದೆ. ಇದು ಕಾಲಕಾಲಕ್ಕೆ ಜನಜನಕ್ಕೆ ಮಾರ್ಪಟ್ಟಿದೆ. ಬೇರೆ ಬೇರೆ ಅರ್ಥ ಕೊಟ್ಟಿದೆ. ಸಾಹಿತಿಯಾದವನು 'ನೀತಿ, ಅನೀತಿ'ಗಳಿಗೆ ಅತೀತನಾಗಿ ನಿಂತು ನಿರೀಕ್ಷಿಸಿ ನೋಡಬೇಕಾದ ಪ್ರಶ್ನೆ ಇದು.... ಇದರಲ್ಲಿಯೂ ಲೈಂಗಿಕ ಪ್ರಶ್ನೆಗಳ ವಿಚಾರದಲ್ಲಿ ಶೃಂಗಾರ, ಒಲುಮೆ, ಸ್ನೇಹಗಳ ವಿಚಾರದಲ್ಲಿ ಜನತೆ, ಹೇಳುತ್ತಿರುವ ಆದರ್ಶ ಒಂದು, ಸಾರುವ ನೀತಿಯೊಂದು, ನಡೆಸುತ್ತಿರುವ ಜೀವನ ಮತ್ತೊಂದು. ಈ ವಿಷಯದಲ್ಲಿ ಜನಗಳದು ಇಬ್ಬಗೆಯ ಬಾಳು. ಬಹುಕಾಲದಿಂದಲೂ ನಡೆದುಬಂದ ವಿಷಯವಿದು. ಅದನ್ನು ಕತ್ತರಿಸಿ, ಚುಚ್ಚಿ, ಎತ್ತಿತೋರಿಸಿ, ಸತ್ಯಕ್ಕೆ ಕನ್ನಡಿ ಹಿಡಿಯುತ್ತೇವೆಂದು ನಮ್ಮ ಸಾಹಿತಿಗಳು ಹೇಳುತ್ತಾರೆ. ಸೋಜಿಗವೇನಿಲ್ಲ. ಆದರೆ ಈ ಸತ್ಯ ಎಷ್ಟು ವಿಸ್ತಾರಕ್ಕೆ ಹರಡಿ ಚೆಲ್ಲಿಬಿಟ್ಟಿದೆ; ಎಷ್ಟು ಮನೋಧರ್ಮಗಳ ಪರಿಪಾಕದಿಂದ ರೂಪಿತವಾಗಿದೆ; ಎಷ್ಟು ಕಟ್ಟಲೆಗಳ ಸೆರಗಿನಲ್ಲಿ ಸಿಕ್ಕಿಕೊಂಡಿದೆ ಎಂಬುದನ್ನು ತಿಳಿಯುವುದಕ್ಕೆ ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ? ಅದರ ಒಂದೊಂದು ಸೆರಗೂ ಹಲವಾರು ಕನಸು, ಯಾತನೆ, ಸುಖ, ದು:ಖಗಳನ್ನು ಕೆರಳಿಸಬಲ್ಲದು? ನಮ್ಮ ಬರವಣಿಗೆಗಳಿಗೆ ಮನಶ್ಶಾಸ್ತ್ರದ ಆಧಾರ ಹೇಳಿ — ಏಡ್ಲರ್, ಯಂಗ್, ಫ್ರಾಯಿಡ್ ಇವರುಗಳು ತೋರಿಸಿರುವ ಬೇತಾಳ ರೂಪವನ್ನು ಜನಕ್ಕೆ ತೋರಿಸಿ ಜನಗಳನ್ನು ಬೆದರಿಸಬೇಕಾದರೂ ಏಕೆ? ಮನಶ್ಶಾಸ್ತ್ರವೆಂಬುದು ಲೈಂಗಿಕ ವಿಚಾರದಲ್ಲಿ ಅಷ್ಟು ಸರಳವಾದ, ಸುಲಭವಾದ — ಶಾಸ್ತ್ರವೆಂದು ನಾನಂತೂ ತಿಳಿದಿಲ್ಲ. ಸ್ವತ: ಗಂಡ-ಹೆಂಡಿರೇ ತಮ್ಮೊಂದು ಜೀವನದಲ್ಲಿ ದಾಂಪತ್ಯ ಕಾಮ, ಪ್ರೇಮಗಳ ಪ್ರಶ್ನೆಗಳನ್ನು ಸಹಜವಾಗಿ, ಸರಳವಾಗಿ, ಸಂಕೋಚವಿಲ್ಲದೆ ಚರ್ಚಿಸಲು ಅಳುಕುತ್ತಿರುವಾಗ, ಅದರ ಸತ್ಯದ ಹಿನ್ನೆಲೆಯನ್ನು ತಿಳಿಯುವುದು ಕಷ್ಟವಾಗಿರುವಾಗ — ಒಬ್ಬ ಸೂಳೆಯ, ಒಬ್ಬ ವೈಯ್ಯಾರಿಯ, ಬೀದಿಯ ಹುಡುಗಿಯ, ಪ್ರಮದೆಯ, ತಾಯಿಯ, ಮಗಳ ಅಥವಾ ಇಂಥ ನೂರಾರು ವಿಭಿನ್ನ ಶೀಲಗಳುಳ್ಳ ಜೀವರುಗಳ ಮನಸ್ಸಿನ ತೆರೆಯಲಿ ಮೂಡಿ ಮಾಯವಾಗುವ, ಬಹಿರಂಗದಲ್ಲಿ ಅವರವರಿಗೇ ಅದರ ನೆಲೆಯ ಗೊತ್ತುಸಿಗದಂತೆ ನಲಿಯುತ್ತಿರುವ, ಅಷ್ಟು ಸುಲಭದಲ್ಲಿ ಪ್ರಕಟವಾಗದ 'ಮನೋಧರ್ಮ'ವನ್ನು ತಿಳಿದು ಬರೆಯುತ್ತಿದ್ದೇನೆ ಎನ್ನುವುದು ಧಾರ್ಷ್ಟ್ಯದ ಮಾತು. ಈ ಮಾತು ಸಾಕಾಗದೆಂದೋ ಏನೋ ನಮ್ಮಲ್ಲಿ ಕೆಲವರು ಈ•ದಾರುಣ ಚಿತ್ರವೇನೆಂದು ತಿಳಿಯಲಿಕ್ಕಾಗಿಯೇ ದುಡ್ಡುತೆತ್ತು ಗಲ್ಲಿಯ ಗುಡಿಸಲುಗಳಿಗೆ ಹೋದ ವರುಂಟಂತೆ. ಅಂಥವರ ಅನ್ವೇಷಣೆಯ ಕಾರ್ಯ ಮುಗಿಯದಿದ್ದರಿಂದ ನಿತ್ಯವೂ ಹೋಗುತ್ತಲೇ ಇದ್ದಾರೆ ಎಂದೂ ಕೇಳಿದ್ದೇನೆ. ಅಂಥವರಾದರೂ ಸರಿಯೇ — ತಮ್ಮ ಮಡದಿಯರೊಡನಾಗಲೀ, ಬೆಲೆಗೆ ಕೊಂಚ ಪ್ರೇಯಸಿಯರೊಡನಾಗಲೀ ಈ ಲೈಂಗಿಕ ಮನಶ್ಶಾಸ್ತ್ರವನ್ನು ಕುರಿತು ನೇರಾಗಿ ಎಷ್ಟು ಚರ್ಚಿಸಿದ್ದಾರಂತೆ? ಜನ ಯಾರನ್ನು ಬೆದರಿಸುವುದಕ್ಕಾಗಿ ಮನಶ್ಶಾಸ್ತ್ರದ ಬೆದರಿಕೆಹಾಕುತ್ತಾರೋ ನಾನು ಬೇರೆ ಕಾಣೆ.

ಸಾಹಿತ್ಯದಲ್ಲಿ ರುಚಿ ಹೇಗೆ ಬೇಕೋ ಹಾಗೆ ಶುಚಿಯೂ ಬೇಕು. ಕದ್ದು, ಮರೆಯಲ್ಲಿ, ತಮ್ಮವರಿಂದ ಅಡಗಿ ಕುಳಿತು ಓದುವ ಸಾಹಿತ್ಯ ರುಚಿಯಾದ ಸಾಹಿತ್ಯವಾಗಿರಬಹುದು, ಅದಂತೂ ಶುಚಿತಾದ ಸಾಹಿತ್ಯ ಲಕ್ಷಣವಲ್ಲ.

(ಶ್ರೀ ಶಿವರಾಮಕಾರಂತ, ಮೈಸೂರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ).

ಮೇಲಿನ ಲೇಖನವನ್ನು ಚಿತ್ತವಿಟ್ಟು ಓದಿರಿ. ಅದು ಪೂರ್ತಿಯಾಗಿ ಮನದಟ್ಟಾಗಿಲ್ಲವೆನ್ನಿಸಿದರೆ ಇನ್ನೊಮ್ಮೆ ಓದಿರಿ. ಕೆಳಗೆ ತೋರಿಸಿದ ವಿಷಯಗಳ ಬಗೆಗೆ ಲೇಖನದಲ್ಲಿ ಏನು ಹೇಳಿದೆ ಎಂದು ಗುರುತಿಸಿರಿ.

(1) ಬದುಕನ್ನು ಕೆಣಕುವ ಮುಖ್ಯ ಪ್ರಶ್ನೆ ಯಾವುದು?
(2) ಸಾಹಿತಿಯು ಅದನ್ನು ಹೇಗೆ ನೋಡುತ್ತಾನೆ — ನೋಡಬೇಕು?
(3) ಜನಗಳು ಇಬ್ಬಗೆಯ ಬಾಳನ್ನು ಹೇಗೆ ನಡೆಸುತ್ತಾರೆ?
(4) ಮನಶ್ಶಾಸ್ತ್ರದ ಆಧಾರಗಳು ಜನರಿಗೆ ತಿಳುವಳಿಕೆ ಕೊಡುತ್ತಿವೆಯೇ?
(5) ವಿವಿಧ ಜನರ ಮನೋಧರ್ಮಗಳನ್ನು ಚೆನ್ನಾಗಿ ಅರಿತು ಬರೆಯುತ್ತೇನೆ ಎಂಬ ಮಾತು ಸತ್ಯಕ್ಕೆ ದೂರವಾದುದು.
(6) ಅನುಭವದ ವಿಸ್ತಾರವನ್ನು ಹೊಂದುವ ನೆಪದಲ್ಲಿ ಸ್ವೇಚ್ಛಾಚಾರ ನಡೆದಿದೆಯೇ ಹೊರತು ಅದರಿಂದ ಪ್ರಯೋಜನವಾಗಿಲ್ಲ.
(7) ಸಾಹಿತ್ಯದಲ್ಲಿ ರುಚಿಯೂ ಬೇಕು, ಶುಚಿಯೂ ಇರಬೇಕು.
(8) ಬರಿ ರುಚಿಯಾಗಿರುವ ಸಾಹಿತ್ಯ ಶುಚಿಯಾಗಿರಲಾರದು.

ಮೇಲಿನ ಮುಖ್ಯ ಮಾತುಗಳ ಸುತ್ತಮುತ್ತ ವಿಚಾರಧಾರೆಯನ್ನು ಶಿವರಾಮ ಕಾರಂತರು ಹರಿಸಿದ್ದಾರೆ. ಅವರ ಬರವಣಿಗೆ ಹರಿತವಾದ, ನೇರವಾದ ಬಿಚ್ಚು ಮನಸ್ಸಿನ ಬರವಣಿಗೆ.

## 24.2.1 ಪಠ್ಯವನ್ನು ಅರ್ಥಮಾಡಿಕೊಳ್ಳಲು ಸೂಚನೆಗಳು

ಯಾವುದೇ ಒಂದು ಲೇಖನದ ಅಥವಾ ಅದರ ಭಾಗದ ಸಾರಾಂಶವನ್ನು ಬರೆಯಲು ತೊಡಗುವಾಗ ಕೆಳಗಿನ ಮಾತುಗಳನ್ನು ಗಮನಿಸಬೇಕು.

(1). ಲೇಖನದ ಶೈಲಿ ಎಂಥದು? ಪ್ರಶ್ನರೂಪವಾಗಿದೆಯೇ, ವಾದ ಸ್ವರೂಪದ್ದಿದೆಯೇ, ವರ್ಣನಾತ್ಮಕವಾಗಿದೆಯೇ, ಯಾವ ಪುರುಷದ ಕ್ರಿಯಾಪದಗಳು ಪ್ರಯೋಗವಾಗಿದೆ. ಉಪದೇಶಾತ್ಮಕವಾಗಿದೆಯೋ, ಹೀಗೆ ಲೇಖನದ ಮೂಲಭೂತ ಪ್ರವೃತ್ತಿಯನ್ನು ಗುರುತಿಸುವುದು ಮುಖ್ಯ ಕೆಲಸ. ಸಾರಾಂಶ ಲೇಖನದಲ್ಲಿ ಇದ್ದಕ್ಕಿದ್ದಂತೆ ಶೈಲಿಯ ಅನುಕರಣೆ ಪರಿಣಾಮಕಾರಿಯೆನಿಸದು. ಸಾಧ್ಯವಾದಷ್ಟು ಪುರುಷೇತರ ಬರವಣಿಗೆಯಲ್ಲಿಯೇ ಸಾರಾಂಶ ಮಾಡಬೇಕು ಅಂದರೆ ನಾನು, ನಾವು ಎಂಬ ಸರ್ವನಾಮಗಳ ಹಾಗೂ ಅವುಗಳಿಗೆ ಅನುಗುಣವಾದ ಕ್ರಿಯಾಪದಗಳ ಪ್ರಯೋಗವಿದೆ ಎನ್ನಿ. ಅದನ್ನು ಮೂರನೆಯ ಪುರುಷದ ಸರ್ವನಾಮ ಬಳಸಿ, ಅವುಗಳಿಗೆ ಅನುಗುಣವಾದ ಕ್ರಿಯಾಪದ ಬಳಸಿ ಸಾರಾಂಶ ಬರೆಯುವುದು ಮೇಲು.

(2) ಒಂದೇ ಮಾತನ್ನು ಬೇರೆ ಬೇರೆ ಶಬ್ದಗಳಲ್ಲಿ ಅರ್ಥದ ಒತ್ತಿಗಾಗಿ ಬಳಸಿರುತ್ತಾರೆ. ಅವುಗಳನ್ನು 'ಅಂದರೆ', ಬೇರೆ ಮಾತಿನಲ್ಲಿ ಹೇಳುವುದಾದರೆ 'ಇನ್ನೊಂದು ರೀತಿ' ಹೀಗೆ ಪದದಿಂದ ಸೂಚಿಸಲಾಗುತ್ತದೆ. ಅವುಗಳನ್ನು ಸಾರಾಂಶದಲ್ಲಿ ಬಿಟ್ಟು ಮುಖ್ಯ ಮಾತುಗಳನ್ನು ಮಾತ್ರ ಸಂಗ್ರಹಿಸಬೇಕು.

(3) ಲೇಖನದ ಶೈಲಿ ಅಲಂಕಾರಿಕ ಶೈಲಿಯಾಗಿದ್ದರೆ ತುಂಬಾ ಉಪಮಾ ರೂಪಕ ಮೊದಲಾದ ಅಲಂಕಾರಗಳನ್ನು ಬಳಸಲಾಗುತ್ತದೆ. ಅವುಗಳನ್ನು ಕಡಿಮೆ ಮಾಡಿ ವಿಷಯದ ನಿವೇದನೆಗೆ ಬೇಕಾಗುವಷ್ಟು ಮಾತ್ರ ಇಟ್ಟುಕೊಳ್ಳಬೇಕು.

(4) ಗಾದೆಗಳ ಅಥವಾ ಸೂಕ್ತಿಗಳ ಭಾವ ವಿಸ್ತಾರಣೆಯನ್ನು ಬೇರೆ ಕಡೆಗೆ ಕಲಿತಿದ್ದೀರಿ. ಇಲ್ಲಿ ಅದರ ವಿರುದ್ಧ ಕ್ರಿಯೆ ಇದೆ ಎಂಬುದನ್ನು ಗಮನಿಸಬೇಕು. ಅಂದರೆ ಸಾರಾಂಶ ಲೇಖನದಲ್ಲಿ ಯಾವುದೋ ಒಂದು ವಿವರಣೆಯನ್ನು ಒಂದು ಗಾದೆಯನ್ನು ಹೇಳಿ ಸಂಗ್ರಹಿಸಬಹುದು. ಉದಾಹರಣೆಗೆ ಈಗಿನ ಸಮಾಜದಲ್ಲಿ ಹೇಗೆ ಜನ ತಮ್ಮ ರೂಪ ಬದಲಾಯಿಸುತ್ತಿರುತ್ತಾರೆ. ತಾವೆಂಥ ಮೋಸಗಾರರೇ ಇದ್ದರೂ ಮೇಲೆ ಮುಖದಲ್ಲಿ ಮಾತ್ರ ನಗೆ, ಒಳ್ಳೆ ಮಾತು ಇರುತ್ತದೆ. ಇಂಥ ಜನರ ವರ್ಣನೆಯೇ ಅರ್ಧ ಪುಟ ಇದೆ ಎನ್ನಿ. ಅದನ್ನೇ ''ಬೆಳ್ಳಗಿರುವುದೆಲ್ಲ ಹಾಲಲ್ಲ'' ಎಂಬ ಒಂದೇ ಮಾತಿನಿಂದ ಸಂಗ್ರಹಿಸಬಹುದು.

(5) ಸಾರಾಂಶ ಲೇಖನದಲ್ಲಿ ಮೂಲ ಲೇಖಕನ ಶಬ್ದಗಳನ್ನೇ ಉಪಯೋಗಿಸಬೇಕೆಂಬ ನಿಯಮವಿಲ್ಲ. ನಿಜವಾಗಿ ಹೇಳುವುದಾದರೆ ಅವನ್ನೇ ಬಳಸಿದರೆ ಬರವಣಿಗೆ ಶಿಥಿಲವೇ ಆಗುತ್ತದೆ. ಅವುಗಳನ್ನು ಬೇರೆ ಪರಿಣಾಮಕಾರಿಯಾದ ಮಾತುಗಳಲ್ಲಿ ಹೇಳಬೇಕು.

## 24.3 ಪಠ್ಯದ ಮಾದರಿಗಳು

ಮೇಲಿನ ಸೂಚನೆಗಳನ್ನು ಗಮನದಲ್ಲಿಟ್ಟು ಬೇರೆ ಬೇರೆ ಗದ್ಯ ಭಾಗಗಳನ್ನು ಸಾರಾಂಶ ಮಾಡಲು ಪ್ರಯತ್ನಿಸಿರಿ. ಕೆಳಗೆ ಉದ್ಧರಿಸಿದ ಲೇಖನವನ್ನು ಓದಿರಿ.

**ನಂಬಿಕೆಯ ಪ್ರತಿಬಂಧಕಗಳು**

ಇಂದಿನ ಅನಾಸ್ತಿಕ್ಯ ಸಮಸ್ಯೆಗೆ ಕಾರಣವಾದ ಪ್ರಮುಖ ಪ್ರಭಾವ ವೈಜ್ಞಾನಿಕ ದೃಷ್ಟಿಯ ಬೆಳವಣಿಗೆ. ಪ್ರಬುದ್ಧವಾದ ಸಾಮಾಜಿಕ ಅನುತಾಪವನ್ನೂ ಮತ್ತು ಜಗತ್ತಿನ ಐಕ್ಯತೆಯನ್ನೂ ಪೋಷಿಸಿದ ಮತಧರ್ಮಕ್ಕೆ ಉಳಿಗಾಲವಿಲ್ಲವೆಂಬುದು ನಿಶ್ಚಯ.

**1. ಮತಧರ್ಮ ಮತ್ತು ವಿಜ್ಞಾನ**

ತಳಮಳಿಸುವ ಜಿಜ್ಞಾಸೆ, ಯಾವುದನ್ನೂ ಬರಿಯ ವಿಶ್ವಾಸದ ಆಧಾರದ ಮೇಲೆ ಒಪ್ಪಿಕೊಳ್ಳಲು ಒಡಂಬಡದ ವೈಜ್ಞಾನಿಕ ಮನೋಭಾವ, ಎಲ್ಲ ಸಾಹಸಮಯ ಪ್ರಯೋಗಗಳಿಗೂ ಪ್ರೋತ್ಸಾಹಕಾರಕವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ವಿಮರ್ಶೆಗೆ, ಸೂಕ್ಷ್ಮ ಪರೀಕ್ಷೆಗೆ ಒಳಪಡಿಸದೆ ಯಾವ ಅಭಿಪ್ರಾಯವನ್ನೂ ಇದು ಅಂಗೀಕರಿಸದು. ಪ್ರಶ್ನೆಗಳನ್ನು ಕೇಳಲು, ಸಂಶಯಗಳನ್ನು ಮಂಡಿಸಲು ಸ್ವಾತಂತ್ರ್ಯ ಪಡೆದಿದೆ. ಈ ಚಿತ್ತವೃತ್ತಿ ನಮ್ಮ ಪ್ರಾಕೃತ ಸನ್ನಿವೇಶಗಳ ಮೇಲೆ ನಮಗೆ ವಿಸ್ಮಯಕಾರಕವಾದ ಅಧಿಪತ್ಯವನ್ನೂ ಒದಗಿಸಿ ಕೊಟ್ಟಿದೆ.

ಸಾಮಾನ್ಯವಾಗಿ ಮತಧರ್ಮ ವಿಜ್ಞಾನದ ಈ ಮನೋಧರ್ಮಕ್ಕೆ ವಿರೋಧವಾಗಿಯೇ ಇದೆ. ವಿಜ್ಞಾನದ ರೀತಿ ಪ್ರಾಯೋಗಿಕ, ಮತಧರ್ಮದ ಪದ್ಧತಿ ಪ್ರಮಾಣಬದ್ಧ. ವಿಜ್ಞಾನ ಶಬ್ದ ಪ್ರಮಾಣದ ಮೇಲೆ ಆಧಾರ ಪಡುವುದಿಲ್ಲ. ಸುಶಿಕ್ಷಿತ ಮನಸ್ಸು ಒಪ್ಪುವ ಸಿದ್ಧವಾದ ವಾಸ್ತವಿಕ ನಿದರ್ಶನಗಳ ಮೇಲೆ ನಿಲ್ಲುತ್ತದೆ. ವಿಚಾರಕ್ಕೆ ಅಥವಾ ಜಿಜ್ಞಾಸೆಯ ಸ್ವಾತಂತ್ರ್ಯಕ್ಕೆ ಯಾವ ತಡೆಯನ್ನೂ ವಿಜ್ಞಾನ ಮನ್ನಿಸುವುದಿಲ್ಲ. ಹೊಸ ಅನುಭವ, ಹೊಸ ಜ್ಞಾನವನ್ನು ಯಾವಾಗಲೂ ಸ್ವಾಗತಿಸುತ್ತದೆ. ನಿಜವಾದ ವಿಜ್ಞಾನಿ ಎಂದಿಗೂ ಸ್ವಮತಾಭಿಮಾನಕ್ಕೆ ಶರಣು ಹೋಗುವುದಿಲ್ಲ. ಅವನ ಮನೋಭಾವದಲ್ಲಿ ನಮ್ರತೆ ಇದೆ, ಆತ್ಮಪರೀಕ್ಷೆ ಇದೆ. ಇತರರಿಂದ ಕಲಿಯಲು ಎಂದೂ ಸಿದ್ಧವಾಗಿರುತ್ತದೆ. ವಿಚಾರಸ್ವಾತಂತ್ರ್ಯಕ್ಕೆ ನಾವು ಬೆಲೆ ಕೊಡುವುದಾದರೆ, ಇದು ಮತಧರ್ಮದಲ್ಲಿ ಪ್ರಧಾನವಾದ ಶಾಸನಾತ್ಮಕ ಪ್ರಮಾಣಕ್ಕೆ ವಿರುದ್ಧವಾದದ್ದು.

ಇದಲ್ಲದೆ, ವೈಜ್ಞಾನಿಕ ಅಭಿಪ್ರಾಯಗಳಲ್ಲಿ ಸರ್ವ ವ್ಯಾಪಕತೆಯ ಅಂಶ ಒಂದಿದೆ. ಇದು ಮತಧರ್ಮದ ಸಂಪ್ರದಾಯದಲ್ಲಿ ಕಾಣುವುದಿಲ್ಲ. ವೈಜ್ಞಾನಿಕರು ರಾಷ್ಟ್ರೀಯ ಅಥವಾ ಭೌಗೋಳಿಕ ಸರಹದ್ದುಗಳನ್ನು ಅಂಗೀಕರಿಸುವುದಿಲ್ಲ. ಇತರ

ದೇಶಗಳಲ್ಲಿ ತಮ್ಮಂತೆ ವ್ಯಾಸಂಗ ಮಾಡುತ್ತಿರುವವರೊಡನೆ ವಿಚಾರವಿನಿಮಯ ಮಾಡಿಕೊಳ್ಳುತ್ತಾರೆ. ವಿಜ್ಞಾನ ಮನೋಭಾವಕ್ಕೆ ರಹಸ್ಯ ಅಸಹ್ಯವಾದದ್ದು.

ಪ್ರತಿ ಮತಧರ್ಮವೂ ತನ್ನ ಶಾಸ್ತ್ರ ಒಂದು ವಿಶೇಷವಾದ ರೀತಿಯಲ್ಲಿ ದೇವರ ಮಾತೆಂದೂ ದೋಷ ರಹಿತವೆಂದೂ, ಪ್ರತಿಪಾದಿಸುತ್ತದೆ. ಶಾಸ್ತ್ರದ ನಿರ್ದುಷ್ಟತೆ ವೈಜ್ಞಾನಿಕ ದೃಷ್ಟಿಗೆ ಸರಿಯೆನಿಸುವುದಿಲ್ಲ. ಶಾಬ್ದಿಕ ನಿರ್ದುಷ್ಟತೆಯನ್ನು ಪೂರ್ವಾಚಾರದವರು ಹೊರತು ಮತ್ತೆ ಯಾರೂ ಈಗ ಒಪ್ಪಿ ಹೇಳುವುದಿಲ್ಲ. ದೋಷಾವಿಷ್ಟವಾದ ಮನಸ್ಸು ಹೃದಯಗಳ ಮೇಲೆ ಈಶ್ವರ ಆದೇಶದ ಸಂದೇಶದ ಪರಿಣಾಮವಾದ ಶಾಸ್ತ್ರಗಳು ಸಂಪೂರ್ಣವಾಗಿ ದೋಷ ರಹಿತವೆಂದು ಭಾವಿಸಲು ಸಾಧ್ಯವಿಲ್ಲ.

ಶಾಸ್ತ್ರದ ಅನೇಕ ವಾಕ್ಯಗಳನ್ನು ಶಬ್ದಶಃ ಅರ್ಥಮಾಡಿಕೊಳ್ಳಲಾಗದು. ಉದಾಹರಣೆಗೆ, ಜೆನಿಸಿಸ್‌ನ ಕಾಲನಿರ್ಣಯಗಳೂ, ಕ್ರಮಿಕ ಮತ್ತು ಆಕಸ್ಮಿಕ ಸೃಷ್ಟಿ ಕ್ರಮ, ಘನಸ್ಥಿತಿಯ ಸ್ವರ್ಗ, ಸ್ಥಾವರವಾದ ಪೃಥ್ವಿ ಇವುಗಳನ್ನು ಶಬ್ದಶಃ ಅರ್ಥ ಮಾಡಿಕೊಂಡರೆ ಇವು ವಿಜ್ಞಾನ ನೀಡುವ ತಿಳುವಳಿಕೆಗೆ ನೇರ ವಿರೋಧವಾಗಿವೆ. ಆದರೂ ಮತಧರ್ಮಗಳ ಐತಿಹಾಸಿಕ ಆಧಾರಗಳನ್ನೂ ತೊಡೆದು ಹಾಕಿದರೆ ಮತಧರ್ಮ ಉಳಿಯುವುದಿಲ್ಲ. ಮತಧರ್ಮದಲ್ಲಿ ರೂಢವಾಗಿರುವ ದೃಢೋಕ್ತಿ, ಪರಂಪರೆ, ಪುರಾಣಕಥೆ, ಇವುಗಳನ್ನು ತೆಗೆದು ಹಾಕಿಬಿಟ್ಟರೆ ಅದನ್ನು ಬರಿದು ಮಾಡಿದಂತಾಗುತ್ತದೆ. ಆದ್ದರಿಂದಲೇ ಮತಧರ್ಮಪ್ರವರ್ತಕರು ಶಾಸ್ತ್ರದಲ್ಲಿ ಶ್ರದ್ಧೆಯನ್ನು ಕಡಿಮೆ ಮಾಡುವ ಪ್ರಯತ್ನಗಳನ್ನು ತೀವ್ರವಾಗಿ ಖಂಡಿಸುತ್ತಾರೆ.

### 2. ತುಲನಾತ್ಮಕ ಮತಧರ್ಮ

ತುಲನಾತ್ಮಕ ಮತಧರ್ಮದ ಅಧ್ಯಯನದಿಂದ ನಂಬಿಕೆಗಳು, ಆಚರಣೆಗಳ, ದಿಗ್ಭ್ರಮೆಗೊಳಿಸುವಷ್ಟು ವೈವಿಧ್ಯವೂ ಪರಸ್ಪರ ವಿರೋಧಿಗಳೆಂದೆನಿಸಿಕೊಳ್ಳುವ ಧರ್ಮಗಳಲ್ಲಿರುವ ಅನೇಕ ಸಾದೃಶ್ಯಾಂಶಗಳೂ ಅವತಾರ, ಪವಾಡ ಕ್ರಿಯೆಗಳು, ಉತ್ಸವಗಳು ಇವುಗಳಲ್ಲಿ ಅರ್ಥವತ್ತಾದ ಸಮಾನ ಅಂಶಗಳೂ ಜೀವನದ ಪ್ರತ್ಯುಪಕ್ರಮ ಸೂಚಕವಾದ ವಸಂತೋತ್ಸವಗಳೂ. ಅನೇಕ ಮತಧರ್ಮಗಳಲ್ಲಿ ಕಂಡುಬರುತ್ತವೆ. ಅವು ಸ್ತುತಿ ಸ್ತೋತ್ರಗಳ ಕೃತಜ್ಞತಾ ಪ್ರಕಾಶದ ಸಮಯ. ನಮ್ಮ ಕಣ್ಣುಗಳನ್ನೂ ಹೃದಯಗಳನ್ನೂ ಪರ್ವತಾಗ್ರಹ ಕಡೆಗೆ ಚಾಚುತ್ತೇವೆ, ಶ್ರದ್ಧೆ ಕೆರಳುತ್ತದೆ. ಶಕ್ತಿ ಸಂತೋಷಗಳು ವೃದ್ಧಿಯಾಗುತ್ತವೆ. ಹಿಂದುಗಳು ಇದನ್ನು ಹೋಳಿ ಹಬ್ಬವೆಂದು ಆಚರಿಸುತ್ತಾರೆ. ಯಹೂದ್ಯರು ಇದನ್ನು ಬಂಧನದಿಂದ ಮುಕ್ತಗೊಳಿಸುವ ಈಶ್ವರಾನುಗ್ರಹವಿತರಣದ, ಪ್ಯಾಸ್ ಓವರ್ ಹಬ್ಬವೆಂದು ಕರೆಯುತ್ತಾರೆ. ಕ್ರೈಸ್ತರಿಗೆ ಇದು ಏಸುವಿನ ಪುನರುತ್ಥಾನದ ದಿನ, ಮೃತ್ಯುವನ್ನು ಜಯಿಸಿದ ದಿನ. ವಸಂತದ ಹಬ್ಬ ಪ್ರಾಕೃತಲೋಕದ ಪ್ರತ್ಯುಪಕ್ರಮ ಜೀವನದ ಸೂಚಕ ಮಾತ್ರವಲ್ಲ ಅಪ್ರಾಕೃತ ದಿವ್ಯಲೋಕದ ಸ್ಫುರಣ ಸ್ಮಾರಕವೂ ಆಗಿದೆ. ಗ್ರೀಕರ ಪುರಾಣದ ತಾರಕ — ದೇವತೆಗಳ ಕಲ್ಪನೆಗೂ ಶಿಲುಬೆಗೇರಿ ಪುನರುತ್ಥಾನನಾದ ಏಸುವಿನ ಕಲ್ಪನೆಗೂ ಸಾದೃಶ್ಯಗಳಿವೆ.

(ಡಾ.ಎಸ್. ರಾಧಾಕೃಷ್ಣನ್ ಅವರ 'ರಿಕವರಿ ಆಫ್ ಫೇಥ್' ಎಂಬ ಪುಸ್ತಕದ ಕನ್ನಡ ಅನುವಾದವನ್ನು ''ಮತಧರ್ಮದ ಪುನರುಜ್ಜೀವನ'' ಎಂಬ ಹೆಸರಿನಲ್ಲಿ ಪ್ರೊ. ಯಮುನಾಚಾರ್ಯರು ಮಾಡಿದ್ದಾರೆ. ಈ ಪುಸ್ತಕದ ಪುಟ 6 - 8 ರಿಂದ ಎತ್ತಿಕೊಂಡ ಭಾಗವಿದು.)

# ಅಭ್ಯಾಸ - 1

ಮೇಲಿನ ಭಾಗವನ್ನು ಓದಿಕೊಂಡ ಮೇಲೆ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹುಡುಕಲು ಪ್ರಯತ್ನಿಸಿರಿ.

1) ಕೆಳಗಿನ ಶಬ್ದಗಳ ಅರ್ಥವೇನು? ನಿಮಗೆ ಗೊತ್ತಿಲ್ಲದಿದ್ದರೆ ನಿಘಂಟಿನ ಸಹಾಯ ಪಡೆದು ಅರ್ಥ ತಿಳಿದುಕೊಳ್ಳಿ.

| | |
|---|---|
| ಅನಾಸ್ತಿಕ್ಯ ..............., | ಅನುತಾಪ .................. |
| ಜಿಜ್ಞಾಸೆ ................, | ದೋಷಾವಿಷ್ಟ ............... |
| ನಿರ್ದುಷ್ಟತೆ ................, | ಶಾಬ್ದಿಕ ................. |
| ಪೂರ್ವಾಚಾರ ................., | ಸಾದೃಶ್ಯಾಂಗಗಳು ............... |
| ಪ್ರತ್ಯುಪಕ್ರಮ ......................., | ಪುನರುತ್ಥಾನ ...................... |

ಇವಲ್ಲದೆ ಇನ್ನೂ ಕೆಲವು ಶಬ್ದಗಳು ಕಠಿಣವೆನಿಸಬಹುದು. ಅವುಗಳನ್ನು ಬೇರೆಯಾಗಿ ಬರೆದು ಅರ್ಥವನ್ನು ಮನನ ಮಾಡಿರಿ. ಆ ಅರ್ಥದ ಸಹಾಯದಿಂದ ವಾಕ್ಯಗಳು ಹೆಚ್ಚು ಅರ್ಥ ಕೊಡುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

## 24.3.1 ಪಠ್ಯದ ಚರ್ಚೆ

ಮೇಲಿನ ಬರವಣಿಗೆ ಬಹು ಕಷ್ಟಕರವಾದ ಬರವಣಿಗೆ. ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳು ಅನೇಕ ಸೇರಿಕೊಂಡಿವೆ ನಿಜ. ಹಾಗೆಂದು ಪಂಡಿತರು ತಮ್ಮ ಸಂಸ್ಕೃತ ಪದಗಳನ್ನು ತಂದು ಸೇರಿಸುತ್ತಾರೆ. ಅದರ ಪರಿಣಾಮವಾಗಿ ಆ ರೀತಿಯ ಸಂಸ್ಕೃತ ಶಬ್ದಗಳಿಂದ ತುಂಬಿದ ಶೈಲಿ ಅರ್ಥಮಾಡಿಕೊಳ್ಳಲು ಕಷ್ಟಕರವಾಗಿ ಪರಿಣಮಿಸುತ್ತದೆ. ಉದಾಹರಣೆಗೆ ಮೇಲಿನ ಗದ್ಯಭಾಗದ ಮೊದಲ ವಾಕ್ಯವೃಂದ (ಪ್ಯಾರಾ) ವನ್ನು ನೋಡಿ. ಅಲ್ಲಿ ಒಟ್ಟು 20 ಶಬ್ದಗಳಿವೆ. ಅವುಗಳಲ್ಲಿ 15 ಶಬ್ದಗಳು ಸಂಸ್ಕೃತ ಭಾಷೆಯವು. ಇಂದಿನ, ಬೆಳವಣಿಗೆ, ಮತ್ತು ಉಳಿಗಾಲ, ಇಲ್ಲ. ಈ ಐದನ್ನು ಬಿಟ್ಟರೆ ಮಿಕ್ಕೆಲ್ಲ ಶಬ್ದಗಳು ಸಂಸ್ಕೃತ ಶಬ್ದಗಳು. ಕೆಲವೊಮ್ಮೆ ಅದೇ ಮಾತನ್ನು ತಿಳಿಗನ್ನಡದಲ್ಲಿ ಹೇಳುವುದು ಸಾಧ್ಯವೆನಿಸುತ್ತದೆ. ಉದಾಹರಣೆಗೆ :

''ತುಲನಾತ್ಮಕ ಮತಧರ್ಮದ ಅಧ್ಯಯನದಿಂದ ನಂಬಿಕೆಗಳ, ಆಚರಣೆಗಳ ದಿಗ್ಭ್ರಮೆಗೊಳಿಸುವಷ್ಟು ವೈವಿಧ್ಯವೂ ಪರಸ್ಪರ ವಿರೋಧಿಗಳೆಂದೆನಿಸಿಕೊಳ್ಳುವ ಧರ್ಮಗಳಲ್ಲಿರುವ ಅನೇಕ ಸಾದೃಶಾಂಗಗಳೂ ಅವತಾರ, ಪವಾಡಕ್ರಿಯೆಗಳು, ಉತ್ಸವಗಳು ಇವುಗಳಲ್ಲಿ ಅರ್ಥವತ್ತಾದ ಸಮಾನ ಅಂಶಗಳೂ, ಜೀವನದ ಪ್ರತ್ಯುಪಕ್ರಮ ಸೂಚಕವಾದ ವಸಂತೋತ್ಸವಗಳೂ, ಅನೇಕ ಮತಧರ್ಮಗಳಲ್ಲಿ ಕಂಡುಬರುತ್ತವೆ''.

ಇದೇ ವಾಕ್ಯವನ್ನು ಕೆಳಗೆ ತೋರಿಸಿದಂತೆ ಹೇಳಿದ್ದರೆ ಅರ್ಥವೂ ಸುಲಭವಾಗುತ್ತಿತ್ತು, ರಚನೆಯೂ ಸರಳವಾಗಿರುತ್ತಿತ್ತು.

''ಬೇರೆ ಬೇರೆ ಮತಧರ್ಮಗಳನ್ನು ಅಭ್ಯಾಸ ಮಾಡಿ ನೋಡಿದಾಗ ಅನೇಕ ನಂಬಿಕೆಗಳು ಆಚರಣೆಗಳು ಸಮಾನವಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ ಆಶ್ಚರ್ಯವಾಗುವಷ್ಟು ವೈವಿಧ್ಯವಿದ್ದರೂ, ಸಾಮ್ಯಗಳೂ ಸಾಕಷ್ಟು ದೊರೆಯುತ್ತವೆ. ಪರಸ್ಪರ ವಿರೋಧಿಗಳೆನಿಸುವ ಮತಧರ್ಮಗಳಲ್ಲಿಯೂ ಕೂಡ ಸಾಮ್ಯಗಳು ಕಂಡುಬರುತ್ತವೆ. ಅಲ್ಲದೆ, ಅವತಾರ, ಪವಾಡಗಳು, ಉತ್ಸವಗಳು, ಇವುಗಳಲ್ಲೂ ಸಮಾನ ಅಂಶಗಳು ಕಂಡುಬರುತ್ತವೆ. ಹೊಸ ಜೀವನದ ಪ್ರಾರಂಭಿತವನ್ನು ಸೂಚಿಸುವ ವಸಂತೋತ್ಸವಗಳೂ ಅನೇಕ ಮತಧರ್ಮಗಳಲ್ಲಿ ಕಂಡುಬರುತ್ತವೆ.''

ಹೀಗೆ ಒಂದೇ ಒಂದು ಕ್ಲಿಷ್ಟ ವಾಕ್ಯದ ಬದಲು ಅರ್ಥವಾಗುವಂತಹ ಸಣ್ಣ ಸಣ್ಣ ವಾಕ್ಯಗಳನ್ನು ಬರೆಯಬಹುದು.

## ಅಭ್ಯಾಸ - 2

(1) ಮೇಲೆ ತೋರಿಸಿದಂತೆ ಬೇರೆ ವಾಕ್ಯಗಳನ್ನು ತೆಗೆದುಕೊಂಡು ಅದರ ಅರ್ಥವನ್ನು ಸುಲಭ ಭಾಷೆಯಲ್ಲಿ ಅಭ್ಯಾಸ ಮಾಡಿರಿ. ಇದರಿಂದ ಅರ್ಥಗ್ರಹಣ ಶಕ್ತಿ ಮತ್ತು ಪರಿಣಾಮಕಾರಿಯಾಗಿ ಬರೆಯುವ ಶಕ್ತಿ ಹೆಚ್ಚುತ್ತವೆ.

..............................................................................................................

..............................................................................................................

..............................................................................................................

..............................................................................................................

(2) ಮೇಲಿನ ಗದ್ಯಭಾಗವನ್ನು ಸಾರಾಂಶ ಮಾಡುವ ಮೊದಲು ಅದನ್ನು ಸರಳಗೊಳಿಸಿ ಬರೆಯುವುದು ಒಳಿತು. ಆಮೇಲೆ ಸಾರಾಂಶ ಮಾಡಲು ಪ್ರಯತ್ನಿಸಿರಿ.

..............................................................................................................

..............................................................................................................

..............................................................................................................

..............................................................................................................

## 24.4 ಪಠ್ಯ - 2

ಕೆಳಗಿನ ಸುಲಭವಾದ ಗದ್ಯಭಾಗವನ್ನು ಓದಿರಿ. ಈ ಭಾಗದಲ್ಲಿ ಬಹುಶಃ ಕಠಿಣ ಶಬ್ದಗಳು ಯಾವುವೂ ಬರಲಾರವು.

**ಕಾವ್ಯಾನಂದ**

ಕಾವ್ಯವು ಕವಿಯಿಂದ ನಿರ್ಮಾಣವಾದದ್ದು. ಕವಿಯು ಅನೇಕ ವಿಧವಾದ ಅನುಭವಗಳನ್ನು ಸಂಪಾದಿಕೊಂಡು ತನ್ನ ಪ್ರತಿಭೆಯಿಂದ ವಾಕ್ಚಾತುರ್ಯದಿಂದ ಕಾವ್ಯವನ್ನು ಸೃಷ್ಟಿಸುತ್ತಾನೆ. ಪಾಂಡಿತ್ಯ ದರ್ಶನ, ಲೋಕಾನುಭವ ಅಭ್ಯಾಸ ಈ ಬಲಗಳಿಂದ ಕೈಗೂಡುವ ಕಾವ್ಯ ರಚನಾಶಕ್ತಿಯು ಸಾಮಾನ್ಯ ಪ್ರಯತ್ನಕ್ಕೆ ಎಟಕುವುದಿಲ್ಲ. ಹಾಗೂ ಅದು ಬರಿಯ ಪಾಂಡಿತ್ಯದಿಂದ ಉದ್ಭವವಾಗುವ ಶಕ್ತಿಯೂ ಅಲ್ಲ; ಅದಕ್ಕೆ ಮುರಾರಿಯ ಕೃಪೆಯೂ ಬೇಕು.

ಕವಿಯ ಮಾತು ಸವಿಮಾತು, ಇನಿದಾದ ಮಾತು, ರಸದಿಂದ ಕೂಡಿದುದು, ಭಾವವಿನ್ಯಾಸಗಳಿಂದ ಕೂಡಿದುದು. ಅದನ್ನು ಓದಿ ಆನಂದ ಪಡುವ ಸಹೃದಯನಿಗೆ ಇನ್ನೇನು ಬೇಕು? ಕವಿಯು ನಿರ್ಮಾಣಶಕ್ತಿಯನ್ನು ಹೊಂದಿರುವವನು. ಅವನೂ ಒಂದು ವಿಧದಲ್ಲಿ ಬ್ರಹ್ಮನಂತೆ. ತನ್ನ ಪ್ರತಿಭೆಯಿಂದ ತನ್ನದೇ ಒಂದು ಪ್ರಪಂಚವನ್ನು ಸೃಷ್ಟಿಸಬಲ್ಲ. ಆ ಕೃತಿಯು ತಿಳಿವಳಿಕೆಯನ್ನೂ ಮನಸ್ಸಿಗೆ ಸಮಾಧಾನವನ್ನೂ ಕೊಡಬಹುದು. ಅದು ಉತ್ತಮವಾದ ಕಾಂತೆಯಂತೆ, ತನ್ನ ಪಾತ್ರಗಳ ಮುಖಾಂತರ ನೊಂದ ಹೃದಯಕ್ಕೆ ಬೇಸರಗೊಂಡ ಹೃದಯಕ್ಕೆ ಸಮಾಧಾನವನ್ನು ತರಬಲ್ಲದು. ಆನಂದವನ್ನು ಕಾವ್ಯವು ಕೊಡದಿದ್ದಲ್ಲಿ ಅದರ ಪ್ರಯೋಜನವಾದರೂ ಏನು, ಹಾಗೂ ಕಾವ್ಯದಿಂದ ಹೃದಯ ಶುದ್ಧಿಯೂ ಆಗಬೇಕು. ಮನಸ್ಸಿನ ಮಲಿನವನ್ನು ತೊಳೆದು, ಅದನ್ನು ಶುದ್ಧೀಕರಿಸಿ, ಅದಕ್ಕೆ ಆನಂದವನ್ನೆರೆದು, ಅದನ್ನು ಸತ್ಕಾರ್ಯಕ್ಕೆ ಸ್ಫೂರ್ತಿಸುವ ಕಾರ್ಯವೂ ಅದರದು. ಕವಿ ತನ್ನ ಪ್ರಪಂಚದಲ್ಲಿ, ಉತ್ತಮೋತ್ತಮವಾದ ಭಾಷೆಯಲ್ಲಿ ಮಧುರವಾದ ಸನ್ನಿವೇಶಗಳಲ್ಲಿ ಮನಸ್ಸನ್ನು ನಿಲ್ಲಿಸುವಂತೆ ಮಾಡಿ ರಸಾಸ್ವಾದಕ್ಕೆ ಎಡೆಗೊಟ್ಟು ಬಾಹ್ಯ ಪ್ರಪಂಚವನ್ನು ಮರೆಯುವಂತೆ ಮಾಡುವನು. ಹಾಗೆ ಅವನಿಂದ ರಚಿಸಲ್ಪಟ್ಟ ಕಾವ್ಯಗಳು ನಿಜವಾಗಿ ಅಪೂರ್ವವಾದ ಒಂದು ನಿಧಿ, ಚಿಂತಾಮಣಿ.

ಮನುಷ್ಯನಿಗೆ ತನ್ನ ಜೀವನವನ್ನು ಸುಖಮಯವಾಗಿ ಸಾಗಿಸುವುದು ಕಷ್ಟ. ಜೀವನದಲ್ಲಿ ಬಂದದನ್ನೆಲ್ಲಾ ಇದಿರಿಸಿ ಜೈಸುವುದು ಕಷ್ಟ ಅದಕ್ಕಾಗಿಯೇ ಸಾಕು ಸಂಸಾರ, ಹುಟ್ಟುವುದು ಸಾಯುವುದು ಎಂದು ಭಗವಂತನನ್ನು ಬೇಡುವುದು, ಹಾಗೂ ಸಂಸಾರವನ್ನು ಇದಿರಿಸದಿದ್ದರೂ ಆತ್ಮಗೌರವಕ್ಕೆ ಚ್ಯುತಿ. ಸಂಸಾರವೆಂಬ ಭಾಗ್ಯವಿರಬೇಕು, ಸಂಸಾರಿಯ ಅರಿವಿನ ಸೌಭಾಗ್ಯವೂ ಇರಬೇಕು. ಈಸಬೇಕು, ಇದ್ದು ಜೈಸಬೇಕು ಎಂದು ಮುಂತಾಗಿ ಹಿರಿಯರು ಹೇಳಿದ್ದಾರೆ.

ಜೀವನವನ್ನು ಸಾಗಿಸಲು ಸರಿಯಾದ ತಿಳಿವಳಿಕೆ ಬೇಕು, ಅಭ್ಯಾಸ ಬೇಕು. ನಿಜವಾದ ಜ್ಞಾನವೆಂದರೆ ನಂಬಿ ಆತನಲ್ಲಿ ಭಕ್ತಿ ಮೂಡುವುದು, ನಮ್ಮ ಸರ್ವಶಕ್ತಿಗೂ ಆತನೇ ಕಾರಣನೆಂದು ತಿಳಿಯುವುದು, ಆತನಿಗೆ ಶರಣಾಗುವುದು, ಆತನನ್ನು ನವವಿಧ ಭಕ್ತಿಗಳಿಂದ ಪೂಜಿಸಿ ಆರಾಧಿಸುವುದು. ಇದು ಆಧ್ಯಾತ್ಮ ಬ್ರಹ್ಮಜ್ಞಾನದ ಸೋಪಾನಗಳು. ಇಂತಹ ಅಭಿಪ್ರಾಯಗಳನ್ನು ಉತ್ತಮ ಕವಿಗಳು ತಮ್ಮ ಕಾವ್ಯದಲ್ಲಿ ತೋರಿಸಿಕೊಡುತ್ತಾರೆ. ವಾಲ್ಮೀಕಿ ರಾಮಾಯಣ ಮತ್ತು ವ್ಯಾಸರ ಭಾರತ ಹಾಗಿವೆ. ಕುಮಾರವ್ಯಾಸನು ತನ್ನ ಭಾರತದಲ್ಲಿ 'ಇಲ್ಲಿನೋಳ್ಪುದು ಪದ್ಮನಾಭನ ಮಹಿಮೆ ಧರ್ಮವಿಚಾರ ಮಾತ್ರವನು' ಎಂದಿದ್ದಾನೆ. ಲಕ್ಷೀಶ ಭಾರತವನ್ನು ನೋಡಿದರೆ ಅದು ಕೃಷ್ಣ ಕಥೆ. ಇದನ್ನೆಲ್ಲಾ ಸಮೀಕ್ಷಿಸಿದರೆ, ಈ ಕಾವ್ಯಗಳಲ್ಲಿ ನಮ್ಮ ದೃಷ್ಟಿ ನಮ್ಮ ಮನಸ್ಸು ಪರಮಾತ್ಮನ ಲೀಲೆಯ ಕಡೆಗೆ ಧರ್ಮವಿಚಾರದ ಕಡೆಗೆ ಇರುತ್ತದೆ. ಎಂದರೆ ದೃಷ್ಟಿಯು ಬ್ರಹ್ಮಜ್ಞಾನದ ಕಡೆಗೆ ಇದೆಯೆಂದು ಹೇಳಬೇಕು. ಪರಮಾತ್ಮನಲ್ಲೇ ಆತನ ಶಕ್ತಿಯಲ್ಲೇ ನಂಬಿಕೆಯಿಟ್ಟವರಿಗೆ ಇಂಥ ಭವ್ಯಕಾವ್ಯಗಳಿಗಿಂತ, ಇಂಥ ದಿವ್ಯ ಆನಂದಕ್ಕಿಂತ ಬೇರೇನು ಬೇಕು, ಯೋಗದಲ್ಲಾದರೂ ಸಹ ಇದುವೇ ಗುರಿ. ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸಿ ಆತನನ್ನು ಸಾಕ್ಷಾತ್ಕಾರ ಮಾಡಿ ಕೊಳ್ಳುವುದು. ಆ ಸಿದ್ಧಿಯನ್ನು ಹೊಂದಲು ಸಿದ್ಧನಾದವನಿಗೆ ಭವಜೀವನದ ವ್ಯಾಪಾರಗಳು ಕರ್ಮಕ್ಕಾಗಿ, ಭಗವತ್ ಪ್ರೀತ್ಯರ್ಥ ಮತ್ತು ಫಲಾಪೇಕ್ಷೆಯಿಲ್ಲದೆ ಮಾಡುವುದಕ್ಕಾಗಿ ಎಂದು ಕಂಡುಬಂದು ಮನಸ್ಸು ಚಂಚಲತೆಯನ್ನು ನಿಲ್ಲಿಸುತ್ತದೆ, ನಿರ್ಲಿಪ್ತವಾಗುತ್ತದೆ. ಅದೇ ಯೋಗ. ಕಾವ್ಯವು ಸಹ ಅದೇ ಕೆಲಸವನ್ನೇ ಮಾಡುತ್ತದೆಯಲ್ಲವೆ? ಈ ನಮ್ಮ ಪ್ರಪಂಚವನ್ನು ಮರೆತು ಸತ್ಕವಿ ಪ್ರಪಂಚದಲ್ಲಿ ಅದರಲ್ಲೂ ರಾಮಾಯಣ ಭಾರತ, ಭಾಗವತಗಳಲ್ಲಿ ವಿಹರಿಸುತ್ತಾ ಮೈಮರೆಯುವುದು ಯೋಗವೇ. ಆ ಆನಂದ ಸಾಮ್ರಾಜ್ಯಕ್ಕೆ ನಮ್ಮನ್ನು ಕೊಂಡೊಯ್ಯುವ ಶಕ್ತಿ ಕಾವ್ಯಕ್ಕೆ ಉಂಟು, ಎಂದ ಮೇಲೆ ಕಾವ್ಯಾನಂದವು ಬ್ರಹ್ಮಾನಂದಕ್ಕೆ ಸಮವಲ್ಲವೆ?

ಕಾವ್ಯದಲ್ಲಿ ಆನಂದವು ಕ್ಷಣಿಕ. ಬ್ರಹ್ಮಾನಂದವು ನಿರಂತರ. ಕಾವ್ಯದ ಆನಂದವನ್ನು ಇತರರಿಗೆ ಮಾತಿನಲ್ಲಿ ಹೇಳಬರುತ್ತದೆ. ಬ್ರಹ್ಮಾನಂದದ ಅನುಭವವನ್ನು ಇತರರಿಗೆ ವರ್ಣಿಸಲು ಸಾಧ್ಯವಿಲ್ಲ, ಅದನ್ನು ಸ್ವಾನುಭವದಿಂದಲೇ ತಿಳಿಯಬೇಕು. ಆ ಆನಂದದ ಎಲ್ಲೆಗೆ ಕಾವ್ಯವು ಮನಸ್ಸನ್ನೊಯ್ಯಬಲ್ಲದು. ಆನಂದಕ್ಕೆ ಕಾಮಿನಿಯೂ ಕಾಂಚನವೂ ಕಾರಣ. ಅವಕ್ಕೆ ಪೂರ್ವಜನ್ಮದ ಸುಕೃತವಿರಬೇಕು. ಅವು ಸಿಕ್ಕಬಹುದು, ಸಿಕ್ಕದೆ ಇರಬಹುದು. ಆದರೆ ಕಾವ್ಯವು ಸರ್ವರಿಗೂ ಸುಲಭವಾಗಿ ಸಿಗುವಂಥ ನಿಕ್ಷೇಪ. ಪುಸ್ತಕಗಳು ಸುಲಭವಾಗಿ ಸಿಕ್ಕುವ ಈ ಕಾಲದಲ್ಲಿ ಸತ್ಕಾವ್ಯಗಳನ್ನು ಓದಿ ಆನಂದಪಡದಿದ್ದರೆ ಜನ್ಮವೇ ವ್ಯರ್ಥ ಹಾಗೂ ,ಉತ್ತಮ ಗಮಕಿಗಳು ಸೊಗಸಾಗಿ, ಗತಿಯರಿತು ಶ್ರುತಿಯರಿತು, ಸಾಹಿತ್ಯವರಿತು ಹಾಡಿದರೆ, ಕೇಳಿ ಆನಂದಪಡಬೇಕು. ಕಾವ್ಯವನ್ನು ಓದದ ಬಾಯ್, ಕೇಳದ ಕಿವಿ, ಅದರ ಸವಿಯೊಳಗೆ ಮುಳುಗದ ಮನಸ್ಸು ಇದ್ದೇನು ಸುಖ?

## 24.4.1 ಪಠ್ಯದ ವಿಶ್ಲೇಷಣೆ

ಮೇಲಿನ ಗದ್ಯ ಭಾಗವನ್ನು ಕೆ.ಟಿ.ರಾಮಸ್ವಾಮ್ಯೆಯಂಗಾರ್ ಅವರ "ಗಮಕ ರಹಸ್ಯ" ಎಂಬ ಪುಸ್ತಕದಿಂದ ಆಯ್ದು ಕೊಳ್ಳಲಾಗಿದೆ. ರಾಮಸ್ವಾಮ್ಯೆಯಂಗಾರ್ ಅವರು ಹೆಸರಾಂತ ಗಮಕಿಗಳು. ಅಂದರೆ ಕಾವ್ಯವನ್ನು ಅರ್ಥವಾಗುವಂತೆ ಹಾಡುವವರು. ಗಮಕವೂ ಕೂಡ ಒಂದು ಕಲೆ. ಕವಿಯು ಬರೆದ ಕಾವ್ಯದ ಆಶಯವನ್ನು ಅರ್ಥಮಾಡಿಕೊಂಡು, ಶ್ರೋತೃಗಳಿಗೆ ಅದನ್ನು ಮುಟ್ಟಿಸುವುದೇ ಗಮಕಿಯ ಗುರಿ. ಹೀಗೆ ಒರ್ವ ಗಮಕಿಯು ಕಾವ್ಯದ ಬಗ್ಗೆ ಯಾವ ವಿಚಾರಗಳನ್ನು ಇಟ್ಟುಕೊಂಡಿದ್ದಾನೆ ಎಂಬುದನ್ನು ತಿಳಿದುಕೊಳ್ಳುವುದು ಕುತೂಹಲಕಾರಿಯಾದ ಅಂಶ.

ಮೇಲಿನ ಗದ್ಯಭಾಗದಲ್ಲಿ ಐದು ವಾಕ್ಯವೃಂದಗಳಿವೆ. ಒಂದೊಂದರ ಕೇಂದ್ರ ವಿಚಾರ ಕೆಳಗಿನಂತೆ ಇವೆ —
1ನೆಯ ವಾಕ್ಯವೃಂದ : ಕಾವ್ಯವು ಅನುಭವದ ಪರಾಕಾಷ್ಠೆ, ಪಾಂಡಿತ್ಯದಿಂದ ಭಿನ್ನವಾದುದು.

2ನೆಯ ವಾಕ್ಯವೃಂದ : ಕಾವ್ಯವು ಕಾಂತೆಯಂತೆ ಹೃದಯಕ್ಕೆ ಸಂತುಷ್ಟಿಯನ್ನೂ ಕೊಟ್ಟು ಶುದ್ಧಿ ಮಾಡುತ್ತದೆ.

3ನೆಯ ವಾಕ್ಯವೃಂದ : ಕಷ್ಟ ಸಂಸಾರದಿಂದ ವಿಮುಕ್ತಿ ಕೊಡುವ ಸಾಧನ ಕಾವ್ಯ

4ನೆಯ ವ್ಯಾವೃಂದ : ಜೀವನ ಸಾಗಿಸಲು ಜ್ಞಾನ ಬೇಕು. ಅದನ್ನು ಕಾವ್ಯ ನೀಡಬಲ್ಲದು, ಜೀವನದಲ್ಲಿ ಆನಂದವನ್ನೂ ಅದು ನೀಡಬಲ್ಲದು.

5ನೆಯ ವಾಕ್ಯವೃಂದ : ಕಾವ್ಯ ಚಿರಂತನವಾದ ಬ್ರಹ್ಮಾನಂದವನ್ನು ಕೊಡುತ್ತದೆ.

ಈ ಮುಖ್ಯ ಮಾತುಗಳನ್ನು ಸಮರ್ಥಿಸಲು, ವಿಶದೀಕರಿಸಲು, ಆಯಾ ವಾಕ್ಯವೃಂದಗಳಲ್ಲಿ ಬಂದ ವಾಕ್ಯಗಳನ್ನು ಸಂಗ್ರಹಿಸಿರಿ. ತಾನಾಗಿಯೇ ಸಾರಾಂಶವು ರೂಪಗೊಳ್ಳುತ್ತದೆ.

## ಅಭ್ಯಾಸ - 3

(1) ಸಾಹಿತ್ಯಕ್ಕೂ ನಿಜಜೀವನಕ್ಕೂ ಇರುವ ಸಂಬಂಧವನ್ನು ಸೂಚಿಸಿ, ಜೀವನ ಸಾಹಿತ್ಯವಾಗಬಲ್ಲುದು ಹೇಗೆ ಎಂಬ

ಬಗ್ಗೆ ಅನೇಕರ ವಿಚಾರಗಳನ್ನೂ ಸಂಗ್ರಹಿಸಿರಿ. ಈ ವಿಷಯವನ್ನು ಕುರಿತು ನಿಮಗೆ ಗೊತ್ತಿರುವ ವಿಚಾರಗಳನ್ನು ಸಂಗ್ರಹಿಸಿರಿ.

....................................................................................................

....................................................................................................

....................................................................................................

....................................................................................................

(2) ಮತಧರ್ಮಕ್ಕೂ ವೈಜ್ಞಾನಿಕತೆಗೂ ಇರುವ ಸಂಬಂಧವೇನು? ಬಾಳಿಗೊಂದು ನಂಬಿಕೆ ಇರಬೇಕು. ಈ ವಿಚಾರವಾಗಿ ಡಿ.ವಿ.ಗುಂಡಪ್ಪನವರ ವಿಚಾರಗಳನ್ನು ಸಂಗ್ರಹಿಸಿರಿ. ಅದೇ ಪ್ರಕಾರವೈಚಾರಿಕತೆ ಇಲ್ಲದ ನಂಬಿಕೆ ಕುರುಡಾಗಿ ಇರುತ್ತದೆ. ಆದರೆ ವೈಚಾರಿಕತೆಯ ಹೆಸರಿನಲ್ಲಿ ನಂಬಿಕೆಯ ಮೂಲಕ್ಕೇ ಪ್ರಹಾರವಾಗಬಾರದು. ಇವೆರಡರ ಸಮತೋಲನವೇ ಜೀವನ. ಈ ವಿಚಾರವಾಗಿ ನಿಮಗೆ ಗೊತ್ತಿರುವ, ಓದಿರುವ ವಿಚಾರಗಳನ್ನು ಸಂಗ್ರಹಿಸಿರಿ.

....................................................................................................

....................................................................................................

....................................................................................................

....................................................................................................

## 24.5 ಪಠ್ಯ-3

ಕೆಳಗಿನ ಗದ್ಯದಲ್ಲಿ, ಶಿಲ್ಪಕಲೆಯನ್ನು ಕುರಿತು ಬರೆಯಲಾಗಿದೆ. ಕರ್ನಾಟಕದ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಮೊದಲಾದ ಕಲೆಗಳು ಬಹು ಪ್ರಸಿದ್ಧವಾಗಿವೆ. ಶಿಲ್ಪಕಲೆಯ ಬಗ್ಗೆ ಬಿ.ವೆಂಕೋಬರಾವ್ ಅವರು ಬರೆದ ಗ್ರಂಥ — "ಮೈಸೂರು ದೇಶದ ವಾಸ್ತುಶಿಲ್ಪ" ಎಂಬ ಪುಸ್ತಕದ ಪುಟ 53 — 56 ರಿಂದ ಕೆಳಗಿನ ಗದ್ಯಭಾಗವನ್ನು ಎತ್ತಿಕೊಳ್ಳಲಾಗಿದೆ.

### ಶಿಲ್ಪಕಲೆ

ಭರತಖಂಡದ ವಾಸ್ತುಕಲೆಯು ಶಿಲ್ಪಪ್ರಾಧಾನ್ಯವಾದದ್ದು. ಹಿಂದಿನ ಯಾವ ಕಟ್ಟಡವನ್ನೇ ತೆಗೆದುಕೊಳ್ಳಲಿ, ನಾವು ಅದರ ಸೌಂದರ್ಯವನ್ನು ಅದರಲ್ಲಿ ಶಿಲ್ಪಿಯು ತೋರಿಸಿರುವ ಕೌಶಲ್ಯದ ಮಟ್ಟದಿಂದಲೇ ಅಳೆಯಬೇಕಾಗುತ್ತದೆ. ಒಂದು ಕಟ್ಟಡದ ಸೌಂದರ್ಯವು ಅದರ ಗಾತ್ರದಲ್ಲಿಲ್ಲ. ಗಾತ್ರದಲ್ಲಿ ಅಡಗಿರುವ ಬೇರೆ ಬೇರೆ ಅವಯವಗಳಲ್ಲಿಯೂ, ಅವುಗಳ ಪರಸ್ಪರ ಹೊಂದಾಣಿಕೆಯಲ್ಲಿಯೂ, ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಅಳವಡಿಸುವ ಶಿಲ್ಪಚಾತುರ್ಯದಲ್ಲಿಯೂ ಮತ್ತು ಅವುಗಳು ಒಟ್ಟಿಗೆ ಮನಸ್ಸಿನ ಮೇಲೆ ಉಂಟುಮಾಡುವ ಪ್ರಭಾವದಲ್ಲಿಯೂ ಇದೆ. ದೊಡ್ಡ ಕಟ್ಟಡಗಳು ದೊಡ್ಡ ಪ್ರಮಾಣದಲ್ಲಿಯೂ, ಚಿಕ್ಕವುಗಳು ಚಿಕ್ಕ ಪ್ರಮಾಣದಲ್ಲಿಯೂ ಸುಂದರವೆನಿಸಿಕೊಳ್ಳಬಹುದು. ಇದಕ್ಕೆ ಇಂಗ್ಲೀಷಿನಲ್ಲಿ ಸ್ಕೇಲ್ ಎಂದು ಹೆಸರು. ಶ್ರವಣಬೆಳಗೊಳದ ಗೋಮಟೇಶ್ವರ ವಿಗ್ರಹವು ದೊಡ್ಡ ಪ್ರಮಾಣದಲ್ಲಿ ಸುಂದರವಾಗಿದೆ; ಸೊರಬ ಸಾಗರದ ಗುಡಿಗಾರರು ಕೆತ್ತುವ ಶ್ರೀಗಂಧದ ಮತ್ತು ದಂತದ ಸಣ್ಣ ಸಣ್ಣ ವಿಗ್ರಹಗಳು ಸಣ್ಣ ಪ್ರಮಾಣದಲ್ಲಿ ಸುಂದರವೆನಿಸಿಕೊಳ್ಳುತ್ತವೆ. ದಕ್ಷಿಣ ಭಾರತದ ಮಧುರೆ, ರಾಮೇಶ್ವರ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳು ದೊಡ್ಡ ಪ್ರಮಾಣದವು. ಮಹಾಬಲಿಪುರ, ಸೋಮನಾಥಪುರ ಮುಂತಾದ ದೇವಾಲಯಗಳು ಸಣ್ಣ ಪ್ರಮಾಣದವು. ಇವೆಲ್ಲವೂ ಸುಂದರವಾದವುಗಳೇ.

ಭಾರತೀಯರು ಅನಾದಿಯಿಂದಲೂ ಕುಶಲಕಲೆಗಳಲ್ಲಿ ಆಸಕ್ತಿಯುಳ್ಳವರು. ನಮಗೆ ಅತ್ಯಂತ ಪ್ರಾಚೀನವಾದದೆಂದು ತಿಳಿದಿರುವ ಕಟ್ಟಗಳನ್ನು ನೋಡಿದರೆ, ಅಷ್ಟು ಹೊತ್ತಿಗಾಗಲೆ ಶಿಲ್ಪಿಗಳು ಹೆಚ್ಚಿನ ಕೌಶಲ್ಯವನ್ನು ಪಡೆದಿದ್ದರೆನ್ನುವುದು ವ್ಯಕ್ತವಾಗುತ್ತದೆ. ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಸ್ಥಾಪಿಸಿದ ಅಶೋಕನ ಶಾಸನ ಸ್ತಂಭಗಳೂ, ಸಾಂಚಿ ಸ್ತೂಪದ ಸುತ್ತಲೂ ಆಂಧ್ರರು ಕಟ್ಟಿಸಿದ ಕಲ್ಲಿನ ತೋರಣವೂ ಕಟಕಟೆಯೂ ಹೆಚ್ಚಾದ ಶಿಲ್ಪ ಕುಶಲತೆಯನ್ನು ತೋರುವುವು. ಅಶೋಕನು ಪರ್ಷಿಯಾದಿಂದ ಶಿಲ್ಪಿಗಳನ್ನು ಕರೆಯಿಸಿಕೊಂಡಿದ್ದನೆಂದು ಹೇಳುತ್ತಾರೆ. ಕ್ರಿ.ಶ. ಎರಡನೆಯ ಶತಮಾನದಲ್ಲಿ ಆಳುತ್ತಿದ್ದ ಕುಶಾನರ ರಾಜನಾದ ಕನಿಷ್ಕನು ಬೌದ್ಧಮತವನ್ನು ಅವಲಂಬಿಸಿ ಸಾಹಿತ್ಯ ಮತ್ತು ಕಲೆಗಳಿಗೆ ಪೋಷಣೆಯನ್ನು ಕೊಟ್ಟನು. ತನ್ನ ರಾಜ್ಯದ ಭವನಗಳನ್ನು ಸಿಂಗರಿಸಲು ಗ್ರೀಕ್ ಕಲಾವಿದರನ್ನು ಕರೆಸಿ ನೇಮಿಸಿದನು. ನಂತರ ಸುಸಂಸ್ಕೃತರಾದ ಗುಪ್ತರ ಕಾಲದಲ್ಲಿ ಅವರ ಪೋಷಣೆಯಲ್ಲಿ ಕುಶಲಕಲೆಗಳು ವೃದ್ಧಿಯಾದವು. ಗುಪ್ತರ ಕಾಲವನ್ನು "ಸ್ವರ್ಣಯುಗ" ವೆಂದು ಚರಿತ್ರಕಾರರು ಕರೆಯುತ್ತಾರೆ.

ಇವರ ಕಾಲದಲ್ಲಿ ಹೊರಗಿನ ಪ್ರಭಾವಗಳೆಂದು ಹೇಳುವ, ಪರ್ಷಿಯಾ ಮತ್ತು ಗ್ರೀಕ್‌ರ ಸಂಪರ್ಕದ ಕುರುಹುಗಳು ನಾಶವಾಗಿ ಪೂರ್ಣ ಭಾರತೀಯ ಸ್ವರೂಪವು ಮೂರ್ತಿಗೊಂಡಿತು ಮತ್ತು ವಿಗ್ರಹಗಳ ನಿರ್ಮಾಣಕ್ಕೆ ಹೆಚ್ಚು ಪ್ರಾಶಸ್ತ್ಯ ಬಂತು. ವಿಗ್ರಹಗಳ ಕೆತ್ತನೆಯು ಹೆಚ್ಚಾಯಿತು. ಆ ಕಾಲದಲ್ಲಿ ಕೆತ್ತಿದ ವಿಗ್ರಹಗಳೆಲ್ಲವೂ ಬೌದ್ಧಮತಕ್ಕೆ ಸಂಬಂಧಿಸಿದ್ದುವಾಗಿದ್ದವು. ಮೊದಮೊದಲು ಕೆತ್ತಿದ ವಿಗ್ರಹಗಳು ಧೃಡಕಾಯವುಳ್ಳವುಗಳಾಗಿದ್ದು ಮುಗ್ಧಗೊಳಿಸುವಷ್ಟು ಅಂಗಸೌಷ್ಟವವನ್ನೂ ದೇಹಮಾರ್ದವವನ್ನೂ ವ್ಯಕ್ತಗೊಳಿಸುತ್ತವೆ. ಅಲ್ಲದೆ ಶಾಂತ ಸ್ವರೂಪವನ್ನು ಹೊಂದಿರುತ್ತವೆ. ಗುಡ್ಡಗಳನ್ನು ಕೊರೆದು ಗುಹಾಂತರ್ದೇವಾಲಯಗಳನ್ನು ನಿರ್ಮಿಸುವ ಪದ್ಧತಿ ಕ್ರಿ.ಶ. ಒಂದು ಎರಡನೆಯ ಶತಮಾನದಲ್ಲಿಯೇ ಪ್ರಾರಂಭವಾಗಿತ್ತು. ಕನ್ಹೇರಿ, ಕಾರ್ಲ್, ಅಜಂತಾ ಈ ಸ್ಥಳಗಳಲ್ಲಿ ಗುಹಾಂತರ್ದೇವಾಲಯಗಳು

ನಿರ್ಮಿತವಾಗಿದ್ದುವು. ಆಗ ಕೊರೆದವುಗಳೆಲ್ಲ ಬೌದ್ಧಮತಕ್ಕೆ ಸೇರಿದುವು. ಕ್ರಿ.ಶ. 5ನೆಯ ಶತಮಾನದಿಂದಾಚೆಗೆ ಬೌದ್ಧ,ಜೈನ ಮತ್ತು ವೈದಿಕ ಮತಗಳಿಗೂ ಗುಹಾಂತರ್ದೇವಾಲಯಗಳು ನಿರ್ಮಿತವಾದವು. ಅವುಗಳಲ್ಲಿ ಕಂಡುಬರುವ ಶಿಲ್ಪ ಕೌಶಲ್ಯವು ಪ್ರಶಂಸನೀಯವಾಗಿತ್ತು.

ನಮಗೆ ಗೊತ್ತಿರುವ ಹಾಗೆ ಕರ್ನಾಟಕದ ದಕ್ಷಿಣದಲ್ಲಿ ಕೇರಳ, ಪಾಂಡ್ಯ, ಚೋಳ ಎಂದು ಮೂರು ಮುಖ್ಯ ರಾಜ್ಯಗಳಿದ್ದುವು. ಇವರ ಜತೆಗೆ ಕ್ರಿ.ಶ. ನಾಲ್ಕನೆಯ ಶತಮಾನದ ಹೊತ್ತಿಗೆ ಪಲ್ಲವರು ತಲೆ ಎತ್ತಿದರು. ಪಲ್ಲವರ ಕಾಲದಲ್ಲಿ (ಕ್ರಿ.ಶ. 600-900) ಶಿಲ್ಪವು ವೃದ್ಧಿ ಹೊಂದಿತು. ಇವರು ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಇವರ ವಂಶಕ್ಕೆ ಸೇರಿದ ನರಸಿಂಹವರ್ಮನು ಚಾಲುಕ್ಯ ದೊರೆಯಾದ ಪುಲಕೇಶಿಯನ್ನು ಗೆದ್ದುದರ ಜ್ಞಾಪಕಾರ್ಥವಾಗಿ ಮದರಾಸಿನ ಬಳಿ ಮಾಮಲ್ಲಪುರದಲ್ಲಿ ಸಪ್ತಮಂಟಪಗಳನ್ನು ಕಟ್ಟಿಸಿದನು. (ಕ್ರಿ.ಶ.645) ಇವೆಲ್ಲವೂ ಒಂದೇ ಕಲ್ಲುಬಂಡೆಗಳಲ್ಲಿ ಕೊರೆಯಲ್ಪಟ್ಟುವು. ಪಲ್ಲವರ ಪತನವಾದ ಮೇಲೆ ಚೋಳರು ತಲೆ ಎತ್ತಿದ್ದರು. (ಕ್ರಿ.ಶ. 900-1150) ಚೋಳರು ಶಿಲ್ಪ ಪ್ರಿಯರು. ಹಲವು ಸುಂದರವಾದ ದೇವಾಲಯಗಳನ್ನು ಕಟ್ಟಿಸಿದರು. ಈ ವಿಷಯದಲ್ಲಿ ಇವರ ಕೀರ್ತಿ ಎಷ್ಟಿತ್ತೆಂದರೆ ದೇಶದಲ್ಲಿ ಎಲ್ಲಿ ಸುಂದರವಾದ ದೇವಾಲಯ ಕಂಡರೂ ಅದು ''ಚೋಳಪ್ರತಿಷ್ಠೆ'' ಎಂದು ಜನಗಳು ಹೇಳಲು ತೊಡಗಿದರು.

ತಂಜಾವೂರಿನಲ್ಲಿ ರಾಜರಾಜನಿಂದ ಕಟ್ಟಿಸಲ್ಪಟ್ಟ ಗುಡಿಯು ಚೋಳರ ಶಿಲ್ಪಕ್ಕೆ ಒಳ್ಳೆಯ ಉದಾಹರಣೆ. ಈ ದೇವಸ್ಥಾನದ ಗೋಪುರವು ಸುಮಾರು 200 ಅಡಿ ಎತ್ತರವಾಗಿದ್ದು ಅದರ ತಲೆಯ ಮೇಲೆ ಒಂದೇ ಕಲ್ಲಿನಲ್ಲಿ ಕೊರೆದ ಭಾರಿ ಶಿಖರವಿದೆ. ಚೋಳರ ವಾಸ್ತು ಕಲೆಯ ವಿಷಯದಲ್ಲಿ ''ಅವರು ದೈತ್ಯರಂತೆ ಮನಸ್ಸುಮಾಡಿ ಅಕ್ಕಸಾಲಿಗರಂತೆ ಮುಗಿಸುತ್ತಿದ್ದರು'' ಎಂದು ಒಬ್ಬ ಆಂಗ್ಲಪಂಡಿತನು ಹೇಳಿದ್ದಾನೆ. ಅವರ ಶಿಲ್ಪಚಾತುರ್ಯವು ಅಷ್ಟು ಸೊಗಸಾಗಿತ್ತು. ಅನಂತರ ಬಂದವರು ಪಾಂಡ್ಯರು (ಕ್ರಿ.ಶ.1100-1350). ಇವರು ಮುಂಚೆಯೇ 7ನೇ ಶತಮಾನದಿಂದ 12ನೆಯ ಶತಮಾನದವರೆಗೆ ಸಾಮಂತರಾಜರಾಗಿ ಬಾಳಿದರು. 13ನೆಯ ಶತಮಾನದಲ್ಲಿ ದಕ್ಷಿಣ ಇಂಡಿಯಾದಲ್ಲಿ ಅವರೇ ಪ್ರಮುಖ ರಾಜರಾಗಿದ್ದರು. ಇವರಲ್ಲಿ ಸುಂದರಪಾಂಡ್ಯನು ಮುಖ್ಯನು. ಮಧುರೆ ಅವನ ರಾಜಧಾನಿಯಾಗಿತ್ತು. ಅವನು ಅಲ್ಲೊಂದು ಸುಂದರವಾದ ದೇವಾಲಯವನ್ನು ಕಟ್ಟಿಸಿದನಂತೆ. ಇವೆಲ್ಲವೂ ಕಗ್ಗಲ್ಲಿನಲ್ಲಿ ಒಂದೇ ಶೈಲಿಯಲ್ಲಿ ನಿರ್ಮಿತವಾದವುಗಳು. ಈ ಶೈಲಿಗೆ ದ್ರಾವಿಡ ಶೈಲಿ ಎಂದು ಹೆಸರು. ಇವುಗಳಲ್ಲಿ ಶಿಲ್ಪವು ದೃಢವಾಗಿಯೂ, ಗಡುಸಾಗಿಯೂ, ಸ್ಫುಟವಾಗಿಯೂ ಕಂಡುಬರುತ್ತದೆ. ಇವುಗಳು ನಿರ್ಮಿತವಾಗಿ ಅನೇಕ ಶತಮಾನಗಳು ಕಳೆದು ಹೋಗಿದ್ದರೂ ನಿನ್ನೆಯೊ ಮೊನ್ನೆಯೊ ನಿರ್ಮಿಸಲ್ಪಟ್ಟಿರುವಂತೆ ಕಾಣುತ್ತಿವೆ.

## 24.5.1 ಪಠ್ಯದ ವಿವರ

ಮೇಲಿನ ಲೇಖನದಲ್ಲಿ ಭಾರತೀಯ ಶಿಲ್ಪಕಲೆಯ ಹಿರಿಮೆಯನ್ನು ಪುರಾತನತೆಯನ್ನೂ ಹೇಳಲಾಗಿದೆ. ಕಲೆಯ ದೃಷ್ಟಿಯಿಂದ ಸ್ವರ್ಣಯುಗವೆನ್ನಿಸಿದ ಗುಪ್ತರ ಕಾಲದಿಂದಲೂ ಭಾರತೀಯ ಕಲೆ ಉಳಿದು ಬೆಳೆದು ಬಂದಿದೆ.

# ಅಭ್ಯಾಸ - 4

(1) ಗದ್ಯವನ್ನು ಓದಿದ ಮೇಲೆ ಶಿಲ್ಪಕತೆಯ ಬಗ್ಗೆ ವೆಂಕೋಬರಾಯರ ವಿಚಾರಗಳನ್ನು ಸಂಗ್ರಹಿಸಿರಿ.

..........................................................................................

..........................................................................................

..........................................................................................

..........................................................................................

..........................................................................................

(2) ದೇವಾಲಯ ಶಿಲ್ಪ ಹಾಗೂ ಮೂರ್ತಿ ಶಿಲ್ಪ ಎರಡೂ ಹೀಗೆ ಒಟ್ಟಾಗಿಯೇ ನಮಗೆ ಗೋಚರವಾಗುತ್ತವೆ. ಬೇರೆ ಬೇರೆ ಸ್ಥಳಗಳಲ್ಲಿರುವ ಶಿಲ್ಪಕಲೆ ಒಂದೊಂದು ಧರ್ಮಕ್ಕೆ ಸಂಬಂಧಿಸಿದುದು ಆಗಿದೆ. ಬೌದ್ಧ, ಜೈನ, ವೈದಿಕ ಧರ್ಮಗಳ ಪುರಾಣಗಳಿಂದ ಆಯ್ದ ಭಾಗಗಳನ್ನು, ವ್ಯಕ್ತಿಗಳನ್ನು ಮೂರ್ತಿಯಾಗಿ ಧರ್ಮಗಳ ಪುರಾಣಗಳಿಂದ ಆಯ್ದ ಭಾಗಗಳನ್ನು, ವ್ಯಕ್ತಿಗಳನ್ನು ಮೂರ್ತಿಯಾಗಿ ಕೆತ್ತಲಾಗುತ್ತದೆ. ಗುಹಾಂತರ್ದೇವಾಲಯಗಳೂ ಕೂಡ ಒಂದು ವಿಶಿಷ್ಟ ವ್ಯವಸ್ಥೆಯಲ್ಲಿ ಗೋಚರವಾಗುತ್ತವೆ. ದ್ರಾವಿಡ ಶೈಲಿಯಲ್ಲಿಯ ದೇವಾಲಯಗಳು ಭವ್ಯವಾಗಿದ್ದು, ಅಲ್ಲಿಯ ಶಿಲ್ಪಕಲೆ ಬಹು ಪ್ರಸಿದ್ಧವಾದುದಾಗಿದೆ. ಈ ಬಗೆಗೆ ಲೇಖನದಲ್ಲಿ ಬಂದ ವಿಚಾರಗಳನ್ನು ಸಂಗ್ರಹಿಸಿರಿ.

..........................................................................................

..........................................................................................

..........................................................................................

..........................................................................................

..........................................................................................

(3) ದ್ರಾವಿಡ ಶೈಲಿಯ ಶಿಲ್ಪವೆಂದು ಹೇಳುವುದರ ಮುಖ್ಯವಾದ ಲಕ್ಷಣಗಳೇನು? ಲೇಖನದಿಂದ ವಿಚಾರಗಳನ್ನು ಸಂಗ್ರಹಿಸಿ ಬರೆಯಿರಿ.

## 24.6 ಒಂದು ಕಥೆ

ಕೆಳಗೆ ಒಂದು ಚಿಕ್ಕ ಕಥೆಯನ್ನು ಕೊಟ್ಟಿದೆ. ದಾನಕ್ಕೆ ಹೆಸರಾದ ಶಿಬಿ ಚಕ್ರವರ್ತಿಯ ಕಥೆ ಅದು. ಶರಣಾಗತ ರಕ್ಷಣೆಗಾಗಿ ಆತ ಮಾಡಿದ ತ್ಯಾಗ ಇಂದಿಗೂ ಹೆಸರಾಗಿದೆ. ಕಥೆಯನ್ನು ಹೇಳುವುದೂ, ಬರೆಯುವುದೂ ಒಂದು ಮಹತ್ವದ ಕಲೆ. ಕಥೆಯನ್ನು ಸಂಕ್ಷೇಪವಾಗಿಯೂ ಹೇಳಬಹುದು, ವಿಸ್ತಾರವಾಗಿಯೂ ಹೇಳಬಹುದು. ಸುದೀರ್ಘವಾದ ರಾಮಾಯಣ, ಮಹಾಭಾರತ, ಭಾಗವತಗಳ ಕಥೆಯನ್ನು ಒಂದೊಂದೇ ಶ್ಲೋಕದಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ. ಏಕಶ್ಲೋಕೀ ರಾಮಾಯಣ, ಏಕಶ್ಲೋಕೀ ಮಹಾಭಾರತ, ಏಕಶ್ಲೋಕೀ ಭಾಗವತ ಎಂದು ಅವು ಪ್ರಸಿದ್ಧಿ ಪಡೆದಿವೆ.

ಕೆಳಗೆ ಉದ್ಧರಿಸಿ ಕಥೆಯನ್ನು "ಆರ್ಯ ಕಥಾ ಮಂಜರಿ" (ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ) ಯಿಂದ ಆಯ್ದುಕೊಳ್ಳಲಾಗಿದೆ. ಅದನ್ನು ಸುಮಾರು ಅದರ ಮೂರನೆಯ ಒಂದಂಶಕ್ಕೆ ಇಳಿಸಿ ಬರೆಯಿರಿ. ಹಾಗೆ ಬರೆಯುವಾಗ ಕಥೆಯ ಅಂದ ಮೈಗೆಡದಂತೆ ನೋಡಿಕೊಳ್ಳಿ.

**ಶಿಬಿ**

**ಶರಣಾಗತರಕ್ಷಣೆ**

ಉಶೀನಗರ - ಶಿಬಿ ಚಕ್ರವರ್ತಿ ಒಮ್ಮೆ ವಿತಸ್ತಾನದಿಯ ಬಳಿ ಯಜ್ಞ ಮಾಡಿದ. ಎಲ್ಲ ಪಾಪಗಳನ್ನೂ ಕಳೆಯಬಲ್ಲ, ನಿರ್ಮಲ ಶೀತಜಲದಿಂದ ಕೂಡಿ ಋಷಿಸೇವ್ಯವಾದ ಆ ಪವಿತ್ರವಾದ ನದೀ ಪ್ರದೇಶದಲ್ಲಿ ಯಜ್ಞ ಮಾಡುತ್ತ ಶತಕ್ರತುವಾದ ಇಂದ್ರನಿಗಿಂತ ಮಿಗಿಲಾದ. ಆಗ ದೇವತೆಗಳಿಗೆ ಮಹಾತ್ಮನಾದ ಉಶೀನರನ ಸತ್ವವನ್ನು ಅರಿಯುವ ಅಪೇಕ್ಷೆಯುಂಟಾಯಿತು. ಇಂದ್ರನು (ಶ್ಯೇನ) ಗಿಡಗವಾಗಿ, ಅಗ್ನಿ (ಕಪೋತ) ಪಾರಿವಾಳವಾಗಿ ಯಜ್ಞ ಭೂಮಿಗೆ ಬಂದರು.

ಕಪೋತವು ಗಿಡಗಕ್ಕೆ ಅಂಜಿ ರಾಜನ ತೊಡೆಯ ಮೇಲೆ ಬಿದ್ದು ಆಶ್ರಯ ಬಯಸಿ ಅಲ್ಲೇ ಮುದುರಿಕೊಂಡಿತು. ಕೂಡಲೆ ಅದನ್ನು ಅಟ್ಟಿಸಿಕೊಂಡು ಬಂದಿದ್ದ ಶ್ಯೇನ ಶಿಬಿಯನ್ನು ಕುರಿತು "ಎಲೆ ಭೂಪ, ಧರ್ಮಾತ್ಮನೆಂದರೆ ನೀನೆ, ಎಂದು ರಾಜರೆಲ್ಲ ಹೇಳುತ್ತಿದ್ದಾರೆ. ಹೀಗಿರಲಾಗಿ ಧರ್ಮ ವಿರುದ್ಧವಾದುದನ್ನು ಏಕೆ ಮಾಡಬಯಸುವೆ? ಹಸಿವಿನಿಂದ ಪೀಡಿಸಲ್ಪಡುತ್ತಿರುವ ನನಗೆ ಈ ಕಪೋತವು ಯೋಗ್ಯವಾದ ಆಹಾರ. ಧರ್ಮದ ನೆವದಲ್ಲಿ ಇದನ್ನು ರಕ್ಷಿಸಿ ಧರ್ಮವನ್ನೇ ತೊರೆದವನಾಗಬೇಡ.

ಶಿಬಿ — ಎಲೆ ಹಿರಿಹಕ್ಕಿಯೆ, ಈ ಕಪೋತ ನಿನಗೆ ಅಂಜಿ ತ್ರಾಸಗೊಂಡು ಪ್ರಾಣದೆಸೆಯಿಂದ ರಕ್ಷಣೆಗಾಗಿ ನನ್ನ ಬಳಿ ಬಂದಿದೆ. ಅಭಯ ಬಯಸಿ ಇಲ್ಲಿಗೆ ಬಂದ ಕಪೋತಕ್ಕೆ ಅಭಯ ನೀಡದಿರುವುದು ಹೇಗೆ ತಾನೆ ಧರ್ಮವಾದೀತು? ಈ ಕಿರಿಕಪೋತ ಕಕ್ಕಾಬಿಕ್ಕಿಯಾಗಿ ನಡುಗಿತ್ತಿದೆ. ಜೀವವನ್ನು ಉಳಿಸಲು ನನ್ನನ್ನು ಆಶ್ರಯಿಸಿರುವ ಈ ಹಕ್ಕಿಯನ್ನು ತೊರೆಯುವುದು ಹೇಗೆ ನ್ಯಾಯವಾದೀತು? ಶರಣಾಗತನನ್ನು ತೊರೆಯುವುದು ಬ್ರಹ್ಮಹತ್ಯೆ ಗೋಮಾತಾ ಹತ್ಯೆಯಷ್ಟೆ ಪಾಪ.

ಶ್ಯೇನ — ಎಲೆ ಮಹೀಪತಿ, ಎಲ್ಲ ಪ್ರಾಣಿಗಳೂ ಆಹಾರದಿಂದ ಹುಟ್ಟುವುವು. ಆಹಾರದಿಂದಲೇ ಬೆಳೆಯುವುವು, ಬದುಕುವುವು. ಎಂತಹ ಬಿಡಲಾರದುದನ್ನಾದರೂ ಬಿಟ್ಟು ಬದುಕಬಹುದು. ಊಟವಿಲ್ಲದೆ ಮಾತ್ರ ಬಹುಕಾಲ ಬದುಕಲಾಗದು. ನನ್ನ ಉಣಿಸು ಈಗ ನನಗೆ ಇಲ್ಲವಾಗಲು ನನ್ನ ಪ್ರಾಣವು ದೇಹ ಬಿಟ್ಟು ಹೋಗುವುದು. ಎಲೆ ಧರ್ಮಾತ್ಮ ನಾನು ಸಾಯಲಾಗಿ ನನ್ನ ಮಡದಿ ಮಕ್ಕಳೂ ಸಾಯುವರು. ಹೀಗಾಗಿ ಈ ಕಪೋತವನ್ನು ಕಾಪಾಡು ವುದರಲ್ಲಿ ಅನೇಕ ಪ್ರಾಣಗಳ ನಾಶಕ್ಕೆ ಅವಕಾಶ ಕೊಡುತ್ತೀಯೆ. ಯಾವ ದಾರಿ ಧರ್ಮಕ್ಕೆ ಅಡ್ಡಿಯೋ ಅದು ಧರ್ಮಕ್ಕೆ ಅಲ್ಲ. ಅದು ತಪ್ಪುದಾರಿ. ಎಲೆ ಸತ್ಯವಿಕ್ರಮ, ಯಾವುದು ಧರ್ಮಕ್ಕೆ ಆತಂಕವಿಲ್ಲವೋ ಅದೇ ಧರ್ಮ. ಎಲೆ ಮಹೀಪಾಲ, ಹೊಂದಿಕೆ ಇಲ್ಲದ ವಿರೋಧ ಮಾರ್ಗಗಳಲ್ಲಿ ಗುರುಲಾಘವಗಳನ್ನು ನಿಶ್ಚಯಿಸಿ, ಯಾವುದರಿಂದ ಬಾಧೆಯಾಗದೋ ಆ ಧರ್ಮವನ್ನು ಆಚರಿಸಬೇಕು. ಮೇಲುಕೀಳು ತೂಕ ಮಾಡಿ ಧರ್ಮಾಧರ್ಮ ನಿಷ್ಕರ್ಷಿಸಿ ಯಾವ ದಾರಿ ಮೇಲೋ ಅದನ್ನು ಮೆಟ್ಟು.

ಶಿಬಿ — ಎಲೆ ವಿಹಗೋತ್ತಮ ಕೇಳು. ಎಷ್ಟೋ ಹಿತಕರವಾದ ಮಾತು ನುಡಿಯುತ್ತಿದ್ದೀಯೆ. ನೀನು ಪಕ್ಷಿರಾಜ ಗರುಡನೇ ಇರಬಹುದೇನು? ನೀನೊಬ್ಬ ಧರ್ಮವೇತ್ತನೆಂಬುದು ಖಂಡಿತ. ಆದರೂ ಬಲು ಆಶ್ಚರ್ಯಕರವಾದ ಧರ್ಮ ಒಕ್ಕಣಿಸುತ್ತಿರುವೆ. ನಿನಗೆ ತಿಳಿಯದಿರುವುದು ಏನೂ ಇರುವಂತೆ ಕಾಣದು. ಶರಣಾಗತನ ಪರಿತ್ಯಾಗವು ಹೇಗೆ ಸಮನೆಂದು ಬಗೆಯುವೆ? ನಿನಗೆ ಬೇಕಾದ್ದು ಆಹಾರ ತಾನೆ. ಆಹಾರ ಬೇರೆಡೆಗೆಯಲ್ಲಿ ಪಡೆಯಲು ಅವಕಾಶವುಂಟು

— ಈ ಪುಟ್ಟ ಹಕ್ಕಿಗಿಂತ ಹೆಚ್ಚು ಆಹಾರ. ಎತ್ತೊ, ಹಂದಿಯೊ, ಜಿಂಕೆಯೊ, ಎಮ್ಮೆಯೊ ಇಲ್ಲವೆ ನೀನು ಬಯಸುವ ಬೇರಾವುದಾದರೂ ಆಹಾರವಾಗಿ ಸ್ವೀಕರಿಸು.

ಶ್ಯೇನ — ಎಲೆ ಮಹಾರಾಜ, ಹಂದಿಯನ್ನಾಗಲಿ, ಹೋರಿಯನ್ನಾಗಲಿ, ಜಿಂಕೆಯನ್ನಾಗಲಿ ನಾ ತಿನ್ನುವುದಿಲ್ಲ. ಕಪೋತವಲ್ಲದೆ ಬೇರೆ ಕಟ್ಟಿಕೊಂಡು ನಾನೇನು ಮಾಡಲಿ? ಎಲೆ ಕ್ಷತ್ರಿಯಪುಂಗವ, ಕಪೋತವು ನನಗೆ ದೈವವು ಏರ್ಪಡಿಸಿರುವ ಆಹಾರ. ಅದನ್ನು ಬಿಟ್ಟುಬಿಡು. ಗಿಡಗ ಕಪೋತಗಳನ್ನು ತಿನ್ನುತ್ತೆಂಬುದು ಸನಾತನ ಸತ್ಯ.

ಶಿಬಿ — ಎಲೆ ಖೇಚರ, ನನ್ನ ಈ ಸಮೃದ್ಧವಾದ ರಾಜ್ಯ ಬೇಕಾದರೆ ಕೊಡುವೆ. ಶರಣಾರ್ಥಿಯಾಗಿ ಬಂದಿರುವ ಈ ಹಕ್ಕಿ ಬಿಟ್ಟು ಬೇರೇನು ಬಯಸಿದರೂ ಅದೆಲ್ಲ ನೀಡುವೆ. ನೀನು ಈ ಹಕ್ಕಿಯನ್ನು ಬಿಟ್ಟುಬಿಡಬೇಕಾದರೆ ಏನು ಮಾಡಬೇಕೋ ಹೇಳು. ಅದನ್ನು ಮಾಡುವೆ. ಈ ಕಪೋತವನ್ನು ಮಾತ್ರ ಕೊಡಲಾರೆ.

ಶ್ಯೇನ — ಅಯ್ಯಾ ನಿನಗೆ ಈ ಕಪೋತದಲ್ಲಿ ಅಷ್ಟು ಮಮತೆಯಾದರೆ ಇದರ ತೂಕದಷ್ಟು ನಿನ್ನ ಮಾಂಸ ಕತ್ತರಿಸಿಕೊಡು. ಈ ಕಪೋತಕ್ಕೆ ಸಮನಾಗುವಷ್ಟು ತೂಕ ಕೊಟ್ಟರೆ ಸಾಕು; ನನಗೆ ತೃಪ್ತಿ.

ಶಿಬಿ — ಎಲೆ ಶ್ಯೇನ, ಈ ನಿನ್ನ ಯಾಚನೆ ಮಹದನುಗ್ರಹವೆಂದು ಬಗೆವೆ. ಅಂತೇ ನಿನ್ನ ಮಾಂಸವನ್ನು ತಕ್ಕಡಿಯಲ್ಲಿ ತೂಗಿ ಕೊಡುವೆ.

ಹೀಗೆ ನುಡಿದು ಪರಮಧರ್ಮವಿದನಾದ ರಾಜ ತನ್ನ ಮಾಂಸವನ್ನು ಕತ್ತರಿಸಿ ತಕ್ಕಡಿಯಲ್ಲಿಟ್ಟ. ಆ ಮಾಂಸಕ್ಕಿಂತ ಕಪೋತವು ಭಾರವಾಗಿತ್ತು. ಮತ್ತೆ ಮಾಂಸ ತೆಗೆದು ತಕ್ಕಡಿಗೆ ಹಾಕಿದ. ಹೀಗೆ ತನ್ನ ಮಾಂಸವೆಲ್ಲ ತೆಗೆದಿಟ್ಟರೂ ಕಪೋತಕ್ಕೆ ಸಮನಾಗಲಿಲ್ಲ. ಆಗ ರಾಜನೇ ತಕ್ಕಡಿಯಲ್ಲಿ ಕೂತ.

ಕೂಡಲೆ ಶ್ಯೇನ ನುಡಿಯಿತು : "ಎಲೆ ಧರ್ಮಜ್ಞ ನಾನು ಇಂದ್ರ, ಈ ಕಪೋತವು ಅಗ್ನಿ. ನಿನ್ನ ಧರ್ಮಬುದ್ಧಿಯನ್ನೂ ಧರ್ಮಾಚರಣೆಯನ್ನೂ ಪರಿಶೀಲಿಸಲೋಸುಗ ಯಜ್ಞವಾಟಕ್ಕೆ ನಾವಿಬ್ಬರೂ ಬಂದೆವು. ಎಲೆ ಭೂಪ, ನಿನ್ನ ಮೈಯಿಂದ ತೆಗೆಯಲ್ಪಟ್ಟ ಈ ಮಾಂಸಖಂಡಗಳು ನಿನ್ನ ಕೀರ್ತಿಯ ಪ್ರತೀಕಗಳಾಗಿ ವಿಶ್ವವನ್ನೇ ನಾಚಿಸುವುವು. ಈ ಲೋಕದಲ್ಲಿ ಎಲ್ಲಿಯವರೆಗೆ ಜನ ನಿನ್ನ ಕಥೆಯನ್ನು ಹೇಳುತ್ತಿರುವವರೋ ಅದುವರೆಗೆ ನಿನಗೆ ಕೀರ್ತಿಯೂ ಪುಣ್ಯಲೋಕಗಳೂ ಶಾಶ್ವತವಾಗಿರುವುವು.

ಇಂತು ಹರಸಿ ಇಂದ್ರಾಗ್ನಿಗಳು ದಿವಕ್ಕೆ ತೆರಳಿದರು. ಧರ್ಮಾತ್ಮನಾದ ಉಶೀನರನು ದ್ಯಾವಾಪೃಥಿವಿಯನ್ನು ಧರ್ಮದಿಂದ ತುಂಬಿ, ವಿಭ್ರಾಜಮಾನವಾದ ದೇಹ ಹೊಂದಿ, ಆ ದೇಹದೊಡನೆಯೇ ಸ್ವರ್ಗಕ್ಕೆ ಅಡರಿದ.

# ಅಭ್ಯಾಸ - 5

(1) ಕಥೆಯ ಪರಿಣಾಮಕ್ಕಾಗಿ, ಒಂದೇ ಅರ್ಥ ಕೊಡುವ ಅನೇಕ ಪರ್ಯಾಯ ಶಬ್ದಗಳು ಇಲ್ಲಿ ಬಳಕೆಯಾಗಿವೆ. ಉದಾಹರಣೆಗೆ : ವಿಹಗ, ಪಕ್ಷಿ, ಹಕ್ಕಿ ಮೊದಲಾದವುಗಳು. ಇದೇ ರೀತಿ ಬೇರೆ ಬೇರೆ ಪರ್ಯಾಯ ಶಬ್ದಗಳನ್ನು ಸಂಗ್ರಹಿಸಿರಿ.

..........................................................................................................

..........................................................................................................

..........................................................................................................

(2) ಇಂದ್ರ ಮತ್ತು ಅಗ್ನಿ ಸೇರಿ ಚಕ್ರವರ್ತಿಯ ಭಕ್ತಿಯನ್ನು ನಿಷ್ಠೆಯನ್ನು ಪರೀಕ್ಷಿಸುತ್ತಾರೆ. ಕಥೆ ಹೀಗೆ ನಡೆಯಿತೋ ಇಲ್ಲವೋ ಎಂಬುದು ಮಹತ್ವದ ವಿಷಯವಲ್ಲ. ಆದರೆ ಅಲ್ಲಿ ಹೇಳಲಾದ ತತ್ವ ಅಂದರೆ "ಬೆನ್ನುಬಿದ್ದವರ ರಕ್ಷಣೆ ಮಾಡಬೇಕು" ಎಂಬುದು ಮಾತ್ರ ಚಿರಂತನ ಸತ್ಯ. ಸಂಗ್ರಹಿಸಿದಾಗ ಯಾವ ಮಾತುಗಳನ್ನು ಬಿಟ್ಟಿರುತ್ತಾರೋ ಅವುಗಳನ್ನು ಇನ್ನೊಮ್ಮೆ ಅವಲೋಕಿಸಿರಿ. ಯಾವ ರೀತಿಯ ಮಾತುಗಳನ್ನು ಬಿಡಲಾಗಿದೆ ಎಂಬ ಬಗ್ಗೆ ಟಿಪ್ಪಣಿ ಬರೆಯಿರಿ.

..........................................................................................................

..........................................................................................................

..........................................................................................................

..........................................................................................................

## 24.7 ಸಾರಾಂಶ

ಸಾರಾಂಶದ ಲೇಖನದಿಂದ ಲೇಖಕನ ಅಭಿಪ್ರಾಯ ಹೆಚ್ಚು ಸ್ಪಷ್ಟವಾಗಿ ಗೊತ್ತಾಗುತ್ತದೆ. ಲೇಖನದ ಶೈಲಿಯನ್ನೂ ಮನೋಧರ್ಮವನ್ನೂ ಅರಿತು ಸಾರಾಂಶ ಲೇಖನ ಮಾಡಬೇಕು. ಒಂದೇ ಮಾತನ್ನು ಬೇರೆ ಬೇರೆ ರೀತಿಯಲ್ಲಿ ಹೇಳಿದ್ದರೆ ಪರಿಣಾಮಕಾರಿಯಾದುದನ್ನು ಆಯ್ದುಕೊಳ್ಳಬೇಕು. ಆಲಂಕಾರಿಕ ಶೈಲಿಯಿದ್ದರೆ, ಮುಖ್ಯ ಮಾತನ್ನು ಹಿಡಿಯಬೇಕು. ಒಂದು ಗಾದೆಯಿಂದ ವಿವರಣೆಯೆಲ್ಲ ಒಳಗೊಳ್ಳುತ್ತಿದ್ದರೆ ಗಾದೆಯಿಂದ ಸಂಗಹಿಸಿ ಹೇಳಬಹುದು.

ಲೇಖಕನ ಮಾತನ್ನೇ ನೇರ ಬಳಸಬಾರದು, ಅದೇ ಅಭಿಪ್ರಾಯವನ್ನು ಸ್ವಂತ ಮಾತಿನಲ್ಲಿ ಹೇಳಬೇಕು. ಒಮ್ಮೊಮ್ಮೆ ಪಠ್ಯವೂ ದೋಷಪೂರ್ಣವಿರಬಹುದು. ಅಥವಾ ಸಂಗ್ರಹ ಲೇಖನಕ್ಕೆ ಯೋಗ್ಯವಾಗಿರದೇ ಇರಬಹುದು. ಅದನ್ನೆಲ್ಲ ವಿಚಾರಿಸಿ ಲೇಖನಕ್ಕೆ ತೊಡಗಬೇಕು. ಈ ಪ್ರಯತ್ನದಲ್ಲಿ ಕೆಲವೊಮ್ಮೆ ಸಂಗ್ರಹ ಲೇಖನವೇ ಮೂಲಲೇಖನಕ್ಕಿಂತ ಒಳ್ಳೆಯ ಬರವಣಿಗೆಯಾಗಬಹುದು. ಇದರಿಂದ ಒಳ್ಳೆಯ ಪಾಠಗಳನ್ನು ಕಲಿತಂತಾಗುತ್ತದೆ.

# ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ - 1**

| | | |
|---|---|---|
| (1) | ಅನಾಸ್ತಿಕ್ಯ | ದೇವರಲ್ಲಿ ವಿಶ್ವಾಸವಿಲ್ಲದಿರುವಿಕೆ |
| | ಜಿಜ್ಞಾಸೆ | ತಿಳಿಯಬೇಕೆಂಬ ಆಶೆ |
| | ನಿರ್ದುಷ್ಟತೆ | ಸರಳತನ |
| | ಪೂರ್ವಾಚಾರ | ಮೊದಲಿನ ಆಚಾರ |
| | ಪ್ರತ್ಯುಪಕ್ರಮ | ಪ್ರತಿಯಾಗಿ ತೊಡಗುವ ಕೆಲಸ |
| | ಅನುತಾಪ | ಅನುಕಂಪ |
| | ದೋಷಾವಿಷ್ಟ | ದೋಷದಿಂದ ಕೂಡಿದ |
| | ಶಾಬ್ದಿಕ | ಶಬ್ದಗಳಲ್ಲಿಯ |
| | ಸಾದೃಶ್ಯಾಂಶಗಳು | ಹೋಲಿಕೆಯ ಭಾಗಗಳು |
| | ಪುನರುತ್ಥಾನ | ಮತ್ತೆ ಮೇಲಕ್ಕೆ ಎದ್ದುಬರುವುದು |
| (2) | ವೈಜ್ಞಾನಿಕ | ಶಾಸ್ತ್ರೀಯ ವಿವರಣೆಯುಳ್ಳ |
| | ಘನಸ್ಥಿತಿ | ಭೌತಿಕವಾಗಿ ವಿವರಿಸಬಹುದಾದ ಸ್ಥಿತಿ |
| | ವೃದ್ಧಿಯಾಗು | ಹೆಚ್ಚಾಗು, ಬೆಳೆ |
| | ಪ್ರಾಕೃತಲೋಕ | ಇಹಲೋಕ |

**ಅಭ್ಯಾಸ - 2**

(1) "ಪ್ರತಿ ಮತಧರ್ಮವೂ ತನ್ನ ಶಾಸ್ತ್ರ ಒಂದು ವಿಶೇಷವಾದ ರೀತಿಯಲ್ಲಿ ದೇವರ ಮಾತೆಂದೂ ದೋಷರಹಿತ ವೆಂದೂ ಪ್ರತಿಪಾದಿಸುತ್ತದೆ."

ಇದೇ ವಾಕ್ಯವನ್ನು ಸುಲಭದಲ್ಲಿ ಹೀಗೆ ಬರೆಯಬಹುದು:
"ಒಂದೊಂದು ಧರ್ಮವೂ ತನ್ನ ನಿಯಮಾವಳಿಗಳು ದೇವರಿಂದಲೇ ಬಂದವುಗಳೆಂದೂ, ಆದುದರಿಂದ ಅವು ತಪ್ಪಿಲ್ಲದವುಗಳೆಂದೂ ಹೇಳುತ್ತದೆ."

(2) ಪಠ್ಯದ ಚರ್ಚೆಯಲ್ಲಿ ಸರಳಗೊಳಿಸುವ ಅನೇಕ ಉದಾಹರಣೆಗಳನ್ನು ಕೊಟ್ಟಿದೆ. ಅದೇ ರೀತಿ ಬೇರೆ ಭಾಗವನ್ನು ಪ್ರಯತ್ನಿಸಬೇಕು.

**ಅಭ್ಯಾಸ - 3**

(1) (ಅ) ನಿಜ ಜೀವನದಲ್ಲಿ ದು:ಖ ದು:ಖಮಯವಾಗಿ, ಸುಖ ಸುಖಮಯವಾಗಿ ಇರುತ್ತದೆ. ಆದರೆ ಸಾಹಿತ್ಯದಲ್ಲಿ ಸುಖ, ದು:ಖಗಳೆರಡೂ ಸುಖಮಯವಾಗಿಯೇ ಇರುತ್ತವೆ.

(ಆ) ನಿಜ ಜೀವನದಲ್ಲಿ ವ್ಯಕ್ತಿ ಸಕ್ರಿಯವಾಗಿ ಭಾಗವಹಿಸುತ್ತಾನೆ, ಆದರೆ ಸಾಹಿತ್ಯದಲ್ಲಿ ಮಾನಸಿಕವಾಗಿ ಆನಂದಿಸುತ್ತಾನೆ.

(ಇ) "ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ ನೀಡುವೆನು ರಸಿಕ ನಿನಗೆ!
ನಿನ್ನ ಕಲ್ಲು ಸಕ್ಕರೆಯಂಥ ಎದೆಯು ಕರಗಿದರೆ ಅದರ ಸವಿಯನ್ನಷ್ಟು ಹನಿಸು ನನಗೆ!"

ಎಂದು ಅಂಬಿಕಾತನಯದತ್ತ (ದ.ರಾ.ಬೇಂದ್ರೆ) ಹೇಳಿದ್ದಾರೆ. ನಿಜಜೀವನದ ಕಷ್ಟವೇನೇ ಇದ್ದರೂ ಅದನ್ನು ಅಸ್ವಾದ್ಯವಾಗಿ ಕವಿ ಕೊಡುತ್ತಾನೆ.

ಇದೇ ರೀತಿ ಬೇರೆ ಮಾತುಗಳನ್ನು ಸಂಗ್ರಹಿಸಿರಿ.

(2) 'ಬಾಳಿಗೊಂದು ನಂಬಿಕೆ' ಎಂಬ ಹೆಸರಿನ ಗ್ರಂಥದಲ್ಲಿ ಶ್ರದ್ಧೆ — ನಂಬಿಕೆ ಇರದಿದ್ದರೆ ಬಾಳು ಹೇಗೆ ಬರಡಾಗುತ್ತದೆ ಎಂದು ಡಿ.ವಿ.ಗುಂಡಪ್ಪನವರು ತೋರಿಸಿದ್ದಾರೆ. ಆ ಗ್ರಂಥವನ್ನು ಓದಿ ವಿಚಾರಗಳನ್ನು ಸಂಗ್ರಹಿಸಿರಿ.

**ಅಭ್ಯಾಸ - 4**

(1) ಕಲೆಗೆ ಗಾತ್ರ ಮುಖ್ಯವಲ್ಲ. ಅದರ ಲಕ್ಷಣ ಮುಖ್ಯ. ಭಾರತೀಯರು ಕುಶಲಕಲೆಯಲ್ಲಿ ಪ್ರವೀಣರು. ಕ್ರಿ.ಶ. ಪೂರ್ವ 3ನೆಯ ಶತಮಾನದಿಂದಲೂ ಶಿಲಾಶಾಸನಗಳು ಕಂಡುಬರುತ್ತವೆ. ಕನಿಷ್ಕನು ತನ್ನ ರಾಜ್ಯದ ಭವನದ ನಿರ್ಮಾಣಕ್ಕೆ ಗ್ರೀಕ್ ಕಲಾವಿದರನ್ನು ನೇಮಿಸಿದ್ದ. ದೇವಾಲಯಗಳ ಶಿಲ್ಪ, ಗುಹೆಗಳಲ್ಲಿ ಮಾಡಿದ ದೇವಾಲಯಗಳು, ಇವನ್ನೆಲ್ಲ ನೋಡಿದರೆ ಭಾರತೀಯ ಕಾಲಭಿರುಚಿ ಗೊತ್ತಾಗುತ್ತದೆ.

ಇದೇ ರೀತಿ ಮುಂದೆ ಬರುವ ವಿಚಾರಗಳನ್ನು ಸಂಗ್ರಹಿಸಿರಿ.

(2) ಭಾರತದ ಶಿಲ್ಪಕಲೆಯಲ್ಲಿ, ವಾಸ್ತುಶಿಲ್ಪ ಅಂದರೆ ದೇವಾಲಯಗಳನ್ನು ಕಟ್ಟುವುದು, ಮೂರ್ತಿಶಿಲ್ಪ ಅಂದರೆ ಮೂರ್ತಿಗಳನ್ನು ಕೆತ್ತುವುದು ಎರಡೂ ಇವೆ. ಎರಡಕ್ಕೂ ಉದಾಹರಣೆಗಳನ್ನು ಕೊಡಬಹುದು. ಅಲ್ಲದೆ ಜೈನ, ಬೌದ್ಧ, ವೈದಿಕ ಮೂರು ಮತಗಳ ಶಿಲ್ಪಗಳು ದೊರೆಯುತ್ತವೆ. ಉದಾಹರಣೆಗೆ ಬಾದಾಮಿಯ ಗುಹೆಗಳಲ್ಲಿ ಮೂರೂ ಧರ್ಮದ ಶಿಲ್ಪಗಳಿವೆ.

ಇದೇ ರೀತಿ ಬೇರೆ ಬೇರೆ ಉದಾಹರಣೆಗಳನ್ನು ಸಂಗ್ರಹಿಸಿರಿ.

(3) ದ್ರಾವಿಡ ಶಿಲ್ಪದ ಮುಖ್ಯ ಲಕ್ಷಣಗಳೆಂದರೆ —
(ಅ) ಎತ್ತರವಾದ ಗೋಪುರಗಳು
(ಆ) ಶಿಲ್ಪವು ದೃಢವಾಗಿಯೂ, ಗಡುಸಾಗಿಯೂ, ಸ್ಫುಟವಾಗಿಯೂ ಇರುತ್ತದೆ
(ಇ) ಎದ್ದುಕಾಣುವ ಲಕ್ಷಣಗಳಿರುತ್ತವೆ
(ಈ) ಕುಸುರಿ ಕೆಲಸ ಹೆಚ್ಚು ಇರುತ್ತದೆ —
ಈ ರೀತಿ ಉಳಿದ ಲಕ್ಷಣಗಳನ್ನು ಸಂಗ್ರಹಿಸಿರಿ.

**ಅಭ್ಯಾಸ - 5**

(1) ಭೂಪ, ರಾಜ, ಚಕ್ರವರ್ತಿ, ಮಹೀಪತಿ, ಮಹೀಪಾಲ,ಮಹಾರಾಜ ;ಜೀವವನ್ನು ಉಳಿಸು, ರಕ್ಷಿಸು ; ಆಹಾರ, ಊಟ, ಉಣಿಸು ; ಸಾಯು, ಪ್ರಾಣಗಳ ನಾಶವಾಗು.

(2) (ಅ) ವರ್ಣನೆಯನ್ನು ಬಿಡಬಹುದು.
(ಆ) ಒಂದೇ ಅರ್ಥಕೊಡುವ ಅನೇಕ ಶಬ್ದಗಳ ಬದಲು ಒಂದೇ ಶಬ್ದ ಬಳಸಬಹುದು.
(ಇ) ಕಥೆಯನ್ನು ಹೇಳುವಾಗ ಬರುವ ಜೋಡಣೆ ಮಾತುಗಳನ್ನು ಬಿಡಬಹುದು. ಉದಾಹರಣೆಗೆ: ಎಲೈ ವಿಹಗೋತ್ತಮ ಕೇಳು,
(ಈ) ಅರ್ಥದ ಒತ್ತಡಕ್ಕಾಗಿ ಬಂದ ಪುನರಾವೃತ್ತಿಯನ್ನೂ ಬಿಡಬಹುದು.

ಹೀಗೆ ಉಳಿದ ಮಾತು ಸಂಗ್ರಹಿಸಿರಿ.